## ಕೃಷಿ ಯಾಂತ್ರೀಕರಣ & ಕೃಷಿ ಸಂಸ್ಕರಣೆ ವಿಭಾಗ

ಕೃಷಿ ಯಾಂತ್ರೀಕರಣ & ಕೃಷಿ ಸಂಸ್ಕರಣೆ ಕಾರ್ಯಕ್ರಮಗಳಡಿ ರಾಜ್ಯವಲಯ ಕೃಷಿ ಯಾಂತ್ರೀಕರಣ ಲೆಕ್ಕ ಶೀರ್ಷಿಕೆ: 2401-00-103-0-15 (106, 422 ಮತ್ತು 423), ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟು ಉಪಯೋಜನೆ ಕಾಯ್ದೆ 2013 ರಡಿ ಬಳಕೆಯಾಗದೆ ಇರುವ ಮೊತ್ತ ಲೆಕ್ಕ ಶೀರ್ಷಿಕೆ: 2401-00-001-1-75 (422 & 423), ಕೇಂದ್ರ ಪುರಸ್ಕೃತ ಕೃಷಿ ಯಾಂತ್ರೀಕರಣ ಉಪ ಅಭಿಯಾನ (SMAM) ಲೆ.ಶಿ:2401-00-113-0-03 (106,422, 423) ಮತ್ತು ಕೃಷಿ ಸಂಸ್ಕರಣೆ ಲೆಕ್ಕ ಶೀರ್ಷಿಕೆ: 2401-00-103-0-15 (106, 422 ಮತ್ತು 423), ಹೈಟೆಕ್ ಹಾರ್ವೆಸ್ಟರ್ ಹಬ್ ಲೆ.ಶೀ:2401-00-103-0-15 (106, 422 ಮತ್ತು 423) ಹೀಗೆ ವಿವಿಧ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

ರೈತರು ಸಹಾಯಧನದಡಿ ಕೃಷಿ ಯಂತ್ರೋಪಕರಣಗಳು / ಸಂಸ್ಕರಣಾ ಘಟಕಗಳನ್ನು ಪಡೆಯಲು ಅರ್ಜಿಯನ್ನು ಸಲ್ಲಿಸಿ ಇಲಾಖೆಯ ಪೂರ್ವಾನುಮತಿ ಪಡೆಯುವುದು ಕಡ್ಡಾಯವಾಗಿರುತ್ತದೆ. ಇಲಾಖೆಯ ಗಮನಕ್ಕೆ ಬರದೆ, ಪೂರ್ವಾನುಮತಿ ಪಡೆಯದ ರೈತರು ಸ್ವಂತವಾಗಿ ಪಡೆದ ಸವಲತ್ತುಗಳಿಗೆ ಸಹಾಯಧನ ನೀಡಲು ಅವಕಾಶವಿರುವುದಿಲ್ಲ. ಈ ಬಗ್ಗೆ ರೈತರಿಗೆ, ರೈತ ಮುಖಂಡರುಗಳಿಗೆ ಹಾಗೂ ಚುನಾಯಿತ ಜನಪ್ರತಿನಿಧಿಗಳಿಗೆ ಸಮಗ್ರವಾಗಿ ಮಾಹಿತಿಯನ್ನು ನೀಡುವುದರೊಂದಿಗೆ ವ್ಯಾಪಕವಾಗಿ ಸಮೂಹ ಮಾಧ್ಯಮಗಳ ಮೂಲಕ ಪ್ರಚಾರ ಕೈಗೊಳ್ಳುವುದು.

**2025-26 ನೇ ಸಾಲಿನ ಆಯವ್ಯಯದಲ್ಲಿ ಕೃಷಿ ಯಾಂತ್ರೀಕರಣ, ಕೃಷಿ ಸಂಸ್ಕರಣೆ & ಹೈಟೆಕ್ ಹಾರ್ವೆಸ್ಟರ್ ಹಬ್ ಕಾರ್ಯಕ್ರಮಗಳಿಗೆ ಒದಗಿಸಿದ ಅನುದಾನ**

**(ಆರ್ಥಿಕ: ಲಕ್ಷ ರೂ.ಗಳಲ್ಲಿ)**

| ಕ್ರ. ಸಂ. | ಕಾರ್ಯಕ್ರಮ / ಯೋಜನೆ | ಲೆಕ್ಕ ಶೀರ್ಷಿಕೆ | ಆಯವ್ಯಯದಲ್ಲಿ ಒದಗಿಸಲಾದ ಅನುದಾನ |
|---|---|---|---|
| | **ಅ. ಕೃಷಿ ಯಾಂತ್ರೀಕರಣ** | | |
| ಅ. | ಕೃಷಿ ಯಾಂತ್ರೀಕರಣ ಉಪ ಅಭಿಯಾನ (SMAM)- ಕೇಂದ್ರ ಪುರಸ್ಕೃತ | PFMS ಮುಖಾಂತರ (2401-00-113-0-02) | 25840.00 |
| ಆ. | ರಾಜ್ಯವಲಯ ಕೃಷಿ ಯಾಂತ್ರೀಕರಣ (ಕೇಂದ್ರ ಪುರಸ್ಕೃತ ಯೋಜನೆಗಳಿಗೆ ಪೂರಕ ಅನುದಾನ) | 2401-00-103-0-15 | 12500.00 |
| ಇ. | ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟು ಉಪಯೋಜನೆ ಕಾಯ್ದೆ 2013ರಡಿ ಬಳಕೆಯಾಗದೆ ಇರುವ ಮೊತ್ತ ಕಾರ್ಯಕ್ರಮದಡಿ ಪರಿಶಿಷ್ಟ ಜಾತಿ ಉಪಯೋಜನೆ ಮತ್ತು ಗಿರಿಜನ ಉಪ ಯೋಜನೆ | 2401-00-001-1-75 | 42.83 |

| | | | |
|---|---|---|---|
| | **ಆ. ಕೃಷಿ ಸಂಸ್ಕರಣೆ** | | |
| ಆ | ಕೃಷಿ ಉತ್ಪನ್ನಗಳ ಸಂಸ್ಕರಣೆ ಕಾರ್ಯಕ್ರಮ (ಕೃಷಿ ಉತ್ಪನ್ನಗಳ ಸಂಸ್ಕರಣಾ ಘಟಕ ಮತ್ತು ಟಾರ್ಪಾಲಿನ್ ವಿತರಣೆ) | 2401-00-103-0-15 | 2700.00 |
| | **ಇ. ಹೈಟೆಕ್ ಹಾರ್ವೆಸ್ಟರ್ ಹಬ್** | | |
| ಉ | ಹೈಟೆಕ್ ಹಾರ್ವೆಸ್ಟರ್ ಹಬ್ | 2401-00-103-0-15 | 4500.00 |

**ಅ. ಕೃಷಿ ಯಾಂತ್ರೀಕರಣ**

ರಾಜ್ಯದಲ್ಲಿ ಕಾರ್ಮಿಕರ ಸಮಸ್ಯೆಯನ್ನು ನೀಗಿಸಿ, ಕೃಷಿ ಚಟುವಟಿಕೆಗಳ ಶ್ರಮದಾಯಕ ದುಡಿಮೆಯನ್ನು ತಗ್ಗಿಸಿ, ಸಕಾಲದಲ್ಲಿ ಕೃಷಿ ಚಟುವಟಿಕೆಗಳನ್ನು ಕೈಗೊಂಡು ಕೃಷಿಯಲ್ಲಿ ಯಾಂತ್ರೀಕರಣವನ್ನು ಪ್ರೋತ್ಸಾಹಿಸಲು "ಕೃಷಿ ಯಾಂತ್ರೀಕರಣ ಯೋಜನೆಯಡಿ" ಕೃಷಿ ಯಂತ್ರೋಪಕರಣಗಳಿಗೆ ಸಾಮಾನ್ಯ ವರ್ಗದ ರೈತರಿಗೆ ಶೇ.50 ರಷ್ಟು ಸಹಾಯಧನ ಹಾಗೂ ಪರಿಶಿಷ್ಟ ಜಾತಿ /ಪಂಗಡದ ರೈತರಿಗೆ ಶೇ.90 ರಷ್ಟು ಸಹಾಯಧನವನ್ನು ಗರಿಷ್ಟ ಮಿತಿ ರೂ.1.00 ಲಕ್ಷದವರೆಗೆ ಮಿತಿಗೊಳಿಸಲಾಗಿದೆ. 45 ಪಿ.ಟಿ.ಒ ಹೆಚ್. ಪಿ ಯವರೆಗೆ ಟ್ರಾಕ್ಟರ್ ಗಳಿಗೆ ಸಾಮಾನ್ಯ ವರ್ಗದ ರೈತರಿಗೆ ಶೇ.50ರಷ್ಟು ಸಹಾಯಧನ ಗರಿಷ್ಠ ರೂ.0.75 ಲಕ್ಷ ಹಾಗು ಪರಿಶಿಷ್ಟ ಜಾತಿ /ಪಂಗಡದ ರೈತರಿಗೆ ಶೇ.90 ಗರಿಷ್ಟ ರೂ.3.00 ಲಕ್ಷ ಸಹಾಯಧನವನ್ನು ನೀಡಲಾಗುವುದು.

2025-26 ನೇ ಸಾಲಿನಲ್ಲಿ ಕೃಷಿ ಯಾಂತ್ರೀಕರಣ ಯೋಜನೆಯಡಿ ಉಳುಮೆಯಿಂದ ಕೊಯ್ಲುವರೆಗೆ ಉಪಯುಕ್ತವಿರುವ ವಿವಿಧ ಮಾದರಿಯ ಟ್ರ್ಯಾಕ್ಟರ್ ಗಳು, ಪವರ್ ಟಿಲ್ಲರ್‌ಗಳು, ಭೂಮಿ ಸಿದ್ಧತೆ ಉಪಕರಣಗಳು, ನಾಟಿ / ಬಿತ್ತನೆ ಉಪಕರಣಗಳು, ಅಂತರ ಬೇಸಾಯ ಉಪಕರಣಗಳು, ಟ್ರಾಕ್ಟರ್ / ಟಿಲ್ಲರ್ / ಎಂಜಿನ್ ಚಾಲಿತ ಸಸ್ಯ ಸಂರಕ್ಷಣಾ, ಬೆಳೆ ಕಟಾವು / ಒಕ್ಕಣೆ ಯಂತ್ರಗಳು, ತ್ಯಾಜ್ಯ ವಸ್ತುಗಳ ನಿರ್ವಹಣ ಉಪಕರಣಗಳು ಹಾಗೂ ಡೀಸಲ್ ಪಂಪ್‌ಸೆಟ್ ಗಳನ್ನು ಸಹಾಯಧನದಡಿ ವಿತರಿಸಲು ಅವಕಾಶವಿರುತ್ತದೆ.

- ಕೇಂದ್ರ ಪುರಸ್ಕೃತ ಕೃಷಿ ಯಾಂತ್ರೀಕರಣ ಉಪ ಅಭಿಯಾನ (SMAM) ಯೋಜನೆಯಡಿ ಒದಗಿಸಲಾಗುವ ಅನುದಾನದ ಆಧಾರದ ಮೇಲೆ ಜಿಲ್ಲಾವಾರು ಕಾರ್ಯಕ್ರಮ ನೀಡಲಾಗುವುದು.
- ಸದರಿ ಕಾರ್ಯಕ್ರಮದ ಅನುಷ್ಠಾನಕ್ಕೆ ಅಗತ್ಯವಿರುವ ಪೂರಕ/ ಹೊಂದಾಣಿಕೆ ಅನುದಾನವನ್ನು ರಾಜ್ಯವಲಯ ಕೃಷಿ ಯಾಂತ್ರೀಕರಣ (ಲೆ.ಶೀ.2401-00-103-0-15) ರಡಿ ಒದಗಿಸಲಾಗುವುದು.
- ರಾಜ್ಯವಲಯ ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟು ಉಪಯೋಜನೆ ಕಾಯ್ದೆ 2013ರಡಿ ಬಳಕೆಯಾಗದೆ ಇರುವ ಮೊತ್ತ ಕಾರ್ಯಕ್ರಮದಡಿ ಪರಿಶಿಷ್ಟ ಜಾತಿ ಉಪಯೋಜನೆ ಮತ್ತು ಗಿರಿಜನ ಉಪ ಯೋಜನೆ (ಲೆ.ಶೀ: 2401-00-001-1-75) ಅಡಿ ಒದಗಿಸುವ ಅನುದಾನವನ್ನು ಒಂದೇ ಬಿಲ್ಲಿನಲ್ಲಿ ಬಳಸಿಕೊಳ್ಳಲು ಅವಕಾಶವಿರುತ್ತದೆ.

**ಆ <u>ಕೃಷಿ ಉತ್ಪನ್ನಗಳ ಸಂಸ್ಕರಣೆ</u> :**

ಕೃಷಿ ಉತ್ಪನ್ನಗಳ ಸಂಸ್ಕರಣೆ ಯೋಜನೆಯ ಪ್ರಮುಖ ಉದ್ದೇಶವು ಗ್ರಾಮೀಣ ಪ್ರದೇಶಗಳಲ್ಲಿ ರೈತರು ಬೆಳೆಯುವ ಕೃಷಿ ಉತ್ಪನ್ನಗಳನ್ನು ಉತ್ತಮ ಸಂಸ್ಕರಣೆಗೆ ಒಳಪಡಿಸಿ ಗುಣಮಟ್ಟದ ಉತ್ಪನ್ನಗಳನ್ನು ರೈತರು ಬಳಸುವುದರೊಂದಿಗೆ ಬಳಕೆದಾರರಿಗೆ

ಒದಗಿಸುವುದಾಗಿದೆ. ಉತ್ತಮ ಗುಣಮಟ್ಟದ ಹಾಗೂ ಸಂಸ್ಕರಿಸಿದ ಉತ್ಪನ್ನಗಳು ರೈತರಿಗೆ ಹೆಚ್ಚಿನ ಬೆಲೆಯನ್ನು ಒದಗಿಸಿಕೊಡುವುದರಿಂದ ಅವರ ಆರ್ಥಿಕ ಸಂಕಷ್ಟಗಳು ಕಡಿಮೆಯಾಗುತ್ತದೆ. ಸದರಿ ಯೋಜನೆಯಡಿ ಕೃಷಿ ಸಂಸ್ಕರಣಾ ಘಟಕಗಳು, ಸಣ್ಣ ಯಂತ್ರ ಚಾಲಿತ ಎಣ್ಣೆಗಾಣ ಘಟಕಗಳಿಗೆ ಸಹಾಯಧನ ಒದಗಿಸಲು ಹಾಗೂ ಟಾರ್ಪಾಲಿನ್ ವಿತರಣೆಗೆ ಪ್ರಾಮುಖ್ಯತೆಯನ್ನು ನೀಡಲಾಗಿದೆ.

ಕಟಾವಿನ ನಂತರ ಕೃಷಿ ಉತ್ಪನ್ನಗಳನ್ನು ಮಳೆ, ಗಾಳಿ ಹಾಗೂ ಇತರೆ ಹವಾಮಾನ ವೈಪರೀತ್ಯಗಳಿಂದ ಸಂರಕ್ಷಿಸಿ ಉತ್ತಮ ಗುಣಮಟ್ಟವನ್ನು ಕಾಯ್ದುಕೊಳ್ಳಲು ಈ ಕೆಳಗಿನ ಮೂರು ಗುಣವೈಶಿಷ್ಟ್ಯ ಗಳನ್ನು ಹೊಂದಿರುವ 8X6 mtr ಅಳತೆಯ ಟಾರ್ಪಾಲಿನ್ ಗಳನ್ನು ಸಹಾಯಧನದಡಿ ವಿತರಿಸಲು ಅವಕಾಶವಿರುತ್ತದೆ.

- ❖ IS: 7903/2017 (Type-II)- 250 GSM, 05 ಪದರಗಳುಳ್ಳ, ಕಪ್ಪು ಬಣ್ಣದ HDPE tarpaulins.
- ❖ IS: 14611/2016 (MN)- 120 GSM, ನೀಲಿ ಬಣ್ಣವುಳ್ಳ multi layered cross laminated tarpaulins.
- ❖ IS: 14611/2016 (HN)- 200 GSM, ಹಳದಿ ಬಣ್ಣವುಳ್ಳ multi layered cross laminated tarpaulins.

ಕೃಷಿ ಉತ್ಪನ್ನಗಳ ಸಂಸ್ಕರಣಾ ಯೋಜನೆ (ರಾಜ್ಯವಲಯ ಲೆ.ಶೀ.2401-00-103-0-15) ಯಡಿ ನೀಡಲಾಗುವ ಕಾರ್ಯಕ್ರಮದಡಿ ಈ ಕೆಳಗಿನಂತೆ ಸಹಾಯಧನ ನಿಗಧಿಪಡಿಸಲಾಗಿದೆ.

a) ಕೃಷಿ ಸಂಸ್ಕರಣಾ ಘಟಕಗಗಳಿಗೆ ಸಾಮಾನ್ಯ ರೈತರಿಗೆ ಶೇ.50 ರಷ್ಟು ಹಾಗೂ ಪರಿಶಿಷ್ಟ ಜಾತಿ / ಪಂಗಡದ ರೈತರಿಗೆ ಶೇ.90 ರಷ್ಟು ಸಹಾಯಧನ ನಿಗದಿಪಡಿಸಲಾಗಿದೆ.

b) ಸಣ್ಣ ಯಂತ್ರ ಚಾಲಿತ ಎಣ್ಣೆಗಾಣ ಘಟಕಗಳಿಗೆ ಸಾಮಾನ್ಯ ರೈತರಿಗೆ ಶೇ.75 ಕ್ಕೆ ಮೀರದಂತೆ ಹಾಗೂ ಪರಿಶಿಷ್ಟ ಜಾತಿ / ಪಂಗಡದ ರೈತರಿಗೆ ಶೇ.90ರಷ್ಟು ಸಹಾಯಧನವನ್ನು ಗರಿಷ್ಟ ರೂ.1.00 ಲಕ್ಷದವರೆಗೆ ಮಿತಿಗೊಳಿಸಿ ನೀಡಬಹುದಾಗಿದೆ.

c) ಟಾರ್ಪಾಲಿನ್ ಗಳ ವಿತರಣೆಗೆ ರಾಜ್ಯವಲಯದಡಿ ಸಾಮಾನ್ಯ ರೈತರಿಗೆ ಶೇ.50 ರಷ್ಟು ಹಾಗೂ ಪರಿಶಿಷ್ಟ ಜಾತಿ /ಪಂಗಡದ ರೈತರಿಗೆ ಶೇ.90 ರಷ್ಟು ಸಹಾಯಧನವನ್ನು ನೀಡಬಹುದಾಗಿದೆ.

A. **ಯೋಜನೆಗಳ ಅನುಷ್ಠಾನದಲ್ಲಿ ಪಾಲಿಸಬೇಕಾದ ಮಾರ್ಗಸೂಚಿ :**

1. 2024-25 ನೇ ಸಾಲಿನಲ್ಲಿ, NFSM ಯೋಜನೆಯಡಿ ನೀಡಿರುವ ಟಾರ್ಪಾಲಿನ್‌ಗೆ ಪೂರಕ ಹೊಂದಾಣಿಕೆ ಬಿಲ್ಲಿಗೆ ನಿಯಮಾನುಸಾರ ಕ್ರಮಬದ್ಧವಾಗಿ ಸಹಾಯಧನ ನೀಡುವುದು.
2. **ದಿ. 01.04.2025 ರ ನಂತರ ಪಡೆದ ಸವಲತ್ತು/ಉಪಕರಣಗಳಿಗೆ ಮಾತ್ರ ಸಹಾಯಧನವನ್ನು ನೀಡುವುದು.**
3. ದಿನಾಂಕ: 01.01.2025 ರಿಂದ ರೈತರ ವಂತಿಕೆ ಪಾವತಿಸಿ ಕಾರ್ಯಾದೇಶ ನೀಡಿ ಸರಬರಾಜಾಗುವ ಕೃಷಿ ಯಂತ್ರೋಪಕರಣಗಳಿಗೆ ಕಡ್ಡಾಯವಾಗಿ ಕೇಂದ್ರ ಸರ್ಕಾರದ Office Memorandum F. No 13-20/2023-M&T (I&P), ದಿನಾಂಕ 27.07.2023 ರನ್ವಯ Centralized Coding ಅನ್ನು ನಮೂದಿಸುವುದು.
4. **ಕೇಂದ್ರ ಕಛೇರಿಯಿಂದ ಅನುಮೋದನೆಗೊಂಡು ಎಂಪ್ಯಾನೆಲ್ ಪಟ್ಟಿಯಲ್ಲಿರುವ ಸಂಸ್ಥೆಯಿಂದ ಪಡೆದ ಕೃಷಿ ಯಂತ್ರೋಪಕರಣ, ಕೃಷಿ ಸಂಸ್ಕರಣಾ ಘಟಕ ಮತ್ತು ಟಾರ್ಪಾಲಿನ್ ಗಳಿಗೆ ಮಾತ್ರ ಸಹಾಯಧನ ನೀಡಲು ಅವಕಾಶವಿರುತ್ತದೆ.**

5. ರೈತರು ಇಚ್ಛಿಸುವ ಕೃಷಿ ಯಂತ್ರೋಪಕರಣಗಳು / ಕೃಷಿ ಸಂಸ್ಕರಣಾ ಘಟಕಗಳನ್ನು ಕೇಂದ್ರ ಕಚೇರಿಯಿಂದ ಅರ್ಹಗೊಂಡ ಸಂಸ್ಥೆಗಳಿಂದ ಪ್ರಚಲಿತವಿರುವ ಮಾರುಕಟ್ಟೆ ದರ / ಅನುಕೂಲಕರ ದರದಲ್ಲಿ ಚೌಕಾಸಿ ಮಾಡಿ ಸವಲತ್ತನ್ನು ಪಡೆಯಲು ಸಂಪೂರ್ಣವಾಗಿ ಸ್ವತಂತ್ರರಿರುತ್ತಾರೆ.

6. ಕೃಷಿ ಯಂತ್ರೋಪಕರಣಗಳ / ಕೃಷಿ ಸಂಸ್ಕರಣಾ ಘಟಕಗಳ ತಯಾರಿಕಾ ನ್ಯೂನತೆಗಳೇನಾದರೂ ಬಂದಲ್ಲಿ ರೈತರು ಸಂಬಂಧಿಸಿದ ರೈತ ಸಂಪರ್ಕ ಕೇಂದ್ರದ ಅಧಿಕಾರಿಗಳಿಗೆ/ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕರುಗಳನ್ನು ಸಂಪರ್ಕಿಸಿ ದೂರನ್ನು ನೀಡಬಹುದು.

7. ಒಂದು ಉಪಕರಣವನ್ನು ಸಹಾಯಧನದಡಿ ಪಡೆದ ನಂತರ ಅದೇ ಉಪಕರಣವನ್ನು ಮುಂದಿನ ಏಳು ವರ್ಷಗಳವರೆಗೆ ಸಹಾಯಧನದಡಿ ಪಡೆಯಲು ಅವಕಾಶವಿರುವುದಿಲ್ಲ.

8. ಪ್ರತಿಯೊಬ್ಬ ರೈತನಿಗೆ ಆಯಾ ಆರ್ಥಿಕ ವರ್ಷದಲ್ಲಿ ಒಂದಕ್ಕಿಂತ ಹೆಚ್ಚಿನ ವಿವಿಧ ರೀತಿಯ ಬೇರೆ ಬೇರೆ ಸವಲತ್ತುಗಳನ್ನು/ಉಪಕರಣಗಳನ್ನು ಅನುದಾನ ಲಭ್ಯತೆ ಆಧಾರದ ಮೇಲೆ ಗರಿಷ್ಟ ರೂ.1.00 ಲಕ್ಷ ಸಹಾಯಧನ ಮಿತಿಗೊಳಿಸಿ ವಿತರಿಸುವುದು.

9. ನೀಡುವ ಕಾರ್ಯಕ್ರಮದಲ್ಲಿ ಮಹಿಳಾ (ಶೇ.33 ರಷ್ಟು) ಮತ್ತು ಅಲ್ಪ ಸಂಖ್ಯಾತರ (ಶೇ.15 ರಷ್ಟು) ಫಲಾನುಭವಿಗಳಿಗೆ ಸಹಾಯಧನ ಒದಗಿಸಲು ಆದ್ಯತೆ ಮೇರೆಗೆ ಪರಿಗಣಿಸುವುದು.

10. ಭಾರತ ಸರ್ಕಾರವು ಕಾಲ ಕಾಲಕ್ಕೆ ಪರಿಷ್ಕರಿಸಿದ ತಯಾರಿಕ ಸಂಸ್ಥೆವಾರು ಟ್ರ್ಯಾಕ್ಟರ್, ಪವರ್ ಟಿಲ್ಲರ್ ಮತ್ತು ಕಂಬೈನ್ಡ್ ಹಾರ್ವೆಸ್ಟರ್‌ಗಳ ಮಾದರಿಗಳಿಗೆ ಮಾತ್ರ ಸಹಾಯಧನವನ್ನು ಒದಗಿಸುವುದು. ಸದರಿ ಅನುಮೋದಿಸಿದ ಪಟ್ಟಿಯ ಮಾಹಿತಿಯನ್ನು https://farmer.gov.in ಪೋರ್ಟಲ್ ನಲ್ಲಿ ಅಪ್ಲೋಡ್ ಮಾಡಲಾಗುತ್ತದೆ. ಅದರಂತೆ 2025-26 ನೇ ಸಾಲಿಗೆ ಕೃಷಿ ಯಾಂತ್ರೀಕರಣ ಸಹಾಯಧನ ಕಾರ್ಯಕ್ರಮದಡಿ ಟ್ರ್ಯಾಕ್ಟರ್, ಪವರ್ ಟಿಲ್ಲರ್ ಮತ್ತು ಕಂಬೈನ್ಡ್ ಹಾರ್ವೆಸ್ಟರ್‌ಗಳನ್ನು ಪೂರೈಸುವಾಗ ಭಾರತ ಸರ್ಕಾರದ ಇತ್ತೀಚಿನ ಅನುಮೋದಿತ ಪಟ್ಟಿ ಮತ್ತು ಇಲಾಖೆಯ ಎಂಪ್ಯಾನೆಲ್ ಪಟ್ಟಿಯಲ್ಲಿ ಅನುಮೋದನೆಗೊಂಡಿರುವ ಯಂತ್ರೋಪಕರಣಗಳ ಮಾದರಿಗಳು ಭಾರತ ಸರ್ಕಾರದ ಇತ್ತೀಚಿನ ಅನುಮೋದಿತ ಪಟ್ಟಿಯಲ್ಲಿ ಇದೆಯೇ ಇಲ್ಲವೇ ಎಂಬುದನ್ನು ಖಾತ್ರಿಪಡಿಸಿಕೊಂಡು ಅರ್ಹವಿರುವ ಮಾದರಿಗಳನ್ನು ಮಾತ್ರ ಸರಬರಾಜು ಪಡೆಯುವುದು. ಒಂದು ವೇಳೆ ಭಾರತ ಸರ್ಕಾರದ ಅನುಮೋದಿತ ಪಟ್ಟಿಯಲ್ಲಿದ್ದು, ಇಲಾಖೆಯ ದರಪಟ್ಟಿಯಲ್ಲಿ ಇಲ್ಲದಿದ್ದರೆ ಅಥವಾ ಇಲಾಖೆಯ ದರಪಟ್ಟಿಯಲ್ಲಿದ್ದು, ಭಾರತ ಸರ್ಕಾರದ ಅನುಮೋದಿತ ಪಟ್ಟಿಯಲ್ಲಿರದಿದ್ದರೆ ಅಂತಹ ಮಾದರಿಗಳಿಗೆ ಸಹಾಯಧನ ಒದಗಿಸಲು ಅವಕಾಶವಿರುವುದಿಲ್ಲ.

11. ಕೃಷಿ ಯಂತ್ರೋಪಕರಣಗಳ ಗುಣ ವೈಶಿಷ್ಟ್ಯತೆ ಬಗ್ಗೆ ರೈತರಿಂದ ಅಹವಾಲು ಸ್ವೀಕೃತವಾದಲ್ಲಿ, ಸರಬರಾಜು ಸಂಸ್ಥೆಗಳಿಂದ ಪರೀಕ್ಷಾ ವರದಿಗಳನ್ನು ಪಡೆದು ವರದಿಗಳೊಂದಿಗೆ ತಾಳೆ ಮಾಡುವುದು.

12. ಪ್ರತಿ ಮಾಹೆಯ ಅಂತ್ಯಕ್ಕೆ ವಿವಿಧ ಯೋಜನೆ / ಲೆಕ್ಕ ಶೀರ್ಷಿಕೆಗಳಡಿ ಸಾಧಿಸಿರುವ ಭೌತಿಕ ಮತ್ತು ಆರ್ಥಿಕ ಪ್ರಗತಿ ವರದಿಯನ್ನು ವಿವಿಧ ಲೆಕ್ಕ ಶೀರ್ಷಿಕೆಗಳಡಿ ಪ್ರತ್ಯೇಕವಾಗಿ ಪ್ರತಿ ತಿಂಗಳು ನಿಗಧಿತ ನಮೂನೆಯಲ್ಲಿ Google Spread Sheet ನಲ್ಲಿ ಅಪ್ಲೋಡ್ ಮಾಡುವುದು.

13. ವಿವಿಧ ಕೃಷಿ ಯಾಂತ್ರೀಕರಣ ಯೋಜನೆಯಡಿ ವಿತರಿಸಿದ ಘಟಕಗಳನ್ನು **ರೈತ ಸಂಪರ್ಕ ಕೇಂದ್ರದ ಅಧಿಕಾರಿಗಳು ಶೇ. 100 ರಷ್ಟು, ತಾಲ್ಲೂಕು ಸಹಾಯಕ ಕೃಷಿ**

ನಿರ್ದೇಶಕರು ಕನಿಷ್ಟ ಶೇ.10 ರಷ್ಟನ್ನು, ವಿಭಾಗಗಳ ಉಪ ಕೃಷಿ ನಿರ್ದೇಶಕರು ತಮ್ಮ ವ್ಯಾಪ್ತಿಯಲ್ಲಿನ ಕನಿಷ್ಟ ಶೇ.3 ರಷ್ಟು ಮತ್ತು ಜಿಲ್ಲೆಯ ಜಂಟಿ ಕೃಷಿ ನಿರ್ದೇಶಕರು ವ್ಯಾಪ್ತಿಯಲ್ಲಿನ ಕನಿಷ್ಟ ಶೇ.1 ರಷ್ಟು ಪರಿಶೀಲನೆಯನ್ನು ಕೆ-ಕಿಸಾನ್ ಮೊಬೈಲ್ ಆಪ್ ನಲ್ಲಿ ಆಡಿಟ್ ಮಾಡಿ ಕಡ್ಡಾಯವಾಗಿ ಅಪ್ಲೋಡ್ ಮಾಡುವುದು.

14. ವರ್ಷಾಂತ್ಯಕ್ಕೆ ಪ್ರಗತಿ ವರದಿಗಳೊಂದಿಗೆ ತಾಳೆಯಾಗುವ ಉಪಯೋಗಿತ ಪತ್ರಗಳನ್ನು ಪ್ರಗತಿ ವರದಿಯೊಂದಿಗೆ ಸಲ್ಲಿಸುವುದು.
15. FRUITS ತಂತ್ರಾಂಶದಲ್ಲಿ ನೊಂದಾಯಿಸಿಕೊಂಡ ಹಾಗೂ ಕೆ-ಕಿಸಾನ್ ಮೂಲಕ ಅರ್ಜಿ ಸಲ್ಲಿಸುವ ರೈತರು ಮಾತ್ರ ಸವಲತ್ತುಗಳನ್ನು ಪಡೆಯಲು ಅರ್ಹರಾಗಿರುತ್ತಾರೆ.
16. **Farm Machinery Banks & High Tech, High Productive Equipment Hub** ಗಳ ಅನುಷ್ಠಾನವನ್ನು ಇಲಾಖೆಯಿಂದ ಕಾಲಕಾಲಕ್ಕೆ ಒದಗಿಸಲಾಗುವ ಮಾರ್ಗಸೂಚಿಗಳನ್ವಯ ಅನುಷ್ಠಾನಗೊಳಿಸುವುದು.
17. ರೈತರಿಗೆ ಸಣ್ಣ ಯಂತ್ರಚಾಲಿತ ಎಣ್ಣೆ ಗಾಣಗಳನ್ನು ವಿತರಿಸುವುದರ ಮೂಲಕ ಪರಿಶುದ್ಧ ಹಾಗೂ ಆರೋಗ್ಯ ಪೂರ್ಣ ಎಣ್ಣೆಯನ್ನು ಉತ್ಪಾದನೆ ಮಾಡಲು ಉತ್ತೇಜಿಸುವುದು. ಈ ಪರಿಶುದ್ಧ ಎಣ್ಣೆ/ ಉತ್ಪಾದನೆಗೆ KOF (Karnataka Co-Operative Oilseeds Growers Federation Limited) ಮತ್ತು ಇ-ಮಾರ್ಕೆಟಿಂಗ್ ಮೂಲಕ ಮಾರುಕಟ್ಟೆ ವ್ಯವಸ್ಥೆ ಕಲ್ಪಿಸಲು ಜಿಲ್ಲಾ ಜಂಟಿ ಕೃಷಿ ನಿರ್ದೇಶಕರು ಕ್ರಮವಹಿಸುವುದು.

**B. ಕೇಂದ್ರ ಪುರಸ್ಕೃತ ಕೃಷಿ ಯಾಂತ್ರೀಕರಣ ಉಪ ಅಭಿಯಾನ (SMAM) ಯೋಜನೆಯಡಿ ಕೃಷಿ ಯಂತ್ರೋಪಕರಣಗಳ ಬ್ಯಾಂಕ್ ಗಳನ್ನು ಅನುಷ್ಠಾನಗೊಳಿಸಲು ಮಾರ್ಗಸೂಚಿ**

1. ಕೇಂದ್ರ ಪುರಸ್ಕೃತ ಕೃಷಿ ಯಾಂತ್ರೀಕರಣ ಉಪ ಅಭಿಯಾನ(SMAM) ಯೋಜನೆಯಡಿ ಕಡಿಮೆ ಮಟ್ಟದ ಯಾಂತ್ರೀಕರಣಗೊಂಡಿರುವ ಆಯ್ದ ಗ್ರಾಮಗಳಲ್ಲಿ ಕೃಷಿ ಯಂತ್ರೋಪಕರಣಗಳ ಮತ್ತು ಕೃಷಿ ಸಂಸ್ಕರಣಾ ಘಟಕಗಳ ಬ್ಯಾಂಕ್ ಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.
2. ಸದರಿ ಘಟಕದಡಿ ಪ್ರತಿ ಕೇಂದ್ರಕ್ಕೆ ರೂ.10.00 ಲಕ್ಷಗಳ ಗರಿಷ್ಠ ರೂ.8.00 ಲಕ್ಷ ಸಹಾಯಧನ ನೀಡಬಹುದಾಗಿದೆ.
3. ಕಡಿಮೆ ಯಾಂತ್ರೀಕೃತ ಶಕ್ತಿ ಲಭ್ಯತೆ ಇರುವಂತಹ ಗ್ರಾಮಗಳನ್ನು ಆಯ್ಕೆ ಮಾಡುವುದು.
4. ಆಯಾ ಗ್ರಾಮಗಳಲ್ಲಿರುವ ನೋಂದಾಯಿತ ರೈತ ಸಹಕಾರಿ ಸೊಸೈಟಿಗಳು (Cooperative Societies of farmers), ನೋಂಧಾಯಿತ ರೈತರ ಸೊಸೈಟಿಗಳು (Registered Farmer Societies), ರೈತ ಉತ್ಪಾದಕ ಸಂಸ್ಥೆಗಳು (FPO), ಪಂಚಾಯತ್ ಗಳಿಂದ ಅರ್ಜಿ ಅಹ್ವಾನಿಸುವುದು.
5. ಒಂದೇ ಗ್ರಾಮದಲ್ಲಿ ಒಂದಕ್ಕಿಂತ ಹೆಚ್ಚು ಅರ್ಜಿ ಬಂದಲ್ಲಿ, ಅನುಭವ, ಹಣಕಾಸಿನ ಸಧೃಡತೆ ಮತ್ತು ಗುಂಪಿನ ಸದಸ್ಯರುಗಳ ಸಂಖ್ಯೆ ಆಧಾರದ ಮೇಲೆ ಆಯ್ಕೆ ಮಾಡುವುದು.
6. ಆಯ್ಕೆಯಾದ ಸಂಸ್ಥೆಗೆ ಸ್ಥಳೀಯವಾಗಿ ಅವಶ್ಯವಿರುವ ಯಂತ್ರೋಪರಣಗಳಿಗೆ ಅನುಗುಣವಾಗಿ ಗರಿಷ್ಟ ರೂ.10.00 ಲಕ್ಷ ಮೌಲ್ಯದ ಯಂತ್ರೋಪಕರಣಗಳಿಗೆ (ಟ್ರ್ಯಾಕ್ಟರ್ ನೊಂದಿಗೆ ಕನಿಷ್ಠ ಮೂರು ಉಪಕರಣಗಳನ್ನು ಅಂದರೆ ಪ್ರಾಥಮಿಕ ಭೂ ಉಳುಮೆ, ದ್ವಿತೀಯ ಹಂತದ ಭೂ ಉಳುಮೆ ಮತ್ತು ಬಿತ್ತನೆ ಉಪಕರಣಗಳನ್ನು ಒಳಗೊಂಡಂತೆ) ಒಂದು ಪ್ರಾಯೋಜನೆ ಸಲ್ಲಿಸಲು ಸೂಚಿಸುವುದು.

7. ಆ ಭಾಗದ ರೈತ ಸಂಪರ್ಕ ಕೇಂದ್ರದ ಅಧಿಕಾರಿಗಳು ಹಾಗೂ ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕರವರು ಪ್ರಾಯೋಜನೆಯನ್ನು ಪರಿಶೀಲಿಸುವುದು. ಅಗತ್ಯವಿದ್ದಲ್ಲಿ ಮಾರ್ಪಾಡುಗಳನ್ನು ಮಾಡಲು ತಿಳಿಸುವುದು. ನಂತರ ತಾಲ್ಲೂಕಿನ ಸಹಾಯಕ ಕೃಷಿ ನಿರ್ದೇಶಕರವರು ಸದರಿ ಪ್ರಾಯೋಜನೆಯನ್ನು ಅನುಮೋದಿಸುವುದು.
8. ಅನುಮೋದಿತ ಪ್ರಾಯೋಜನೆಯಲ್ಲಿರುವ ಉಪಕರಣಗಳನ್ನು ದಾಸ್ತಾನೀಕರಿಸಲು ಸೂಚಿಸುವುದು.
9. ಗುಂಪುಗಳು ಶೇ.20 ಹಣವನ್ನು ಸಂಬಂಧಿತ ಅನುಮೋದಿತ ಸಂಸ್ಥೆಗಳಿಗೆ ಪಾವತಿಸಿ ನಂತರ ಸರ್ಕಾರದ ವಂತಿಕೆಯನ್ನು ಪಾವತಿ ಮಾಡುವುದು.
10. ಇಲಾಖಾ ಅನುಮೋದಿತ ಪಟ್ಟಿಯಲ್ಲಿರುವ ಉಪಕರಣಗಳ ದರಕ್ಕನುಗುಣವಾಗಿ (ಕನಿಷ್ಠ ದರಕ್ಕೆ ನಿಗದಿಪಡಿಸಿದ ಸಹಾಯಧನವನ್ನು ಪರಿಗಣಿಸಿ) ಪ್ರತಿ ಘಟಕಕ್ಕೆ/ಉಪಕರಣಕ್ಕೆ ಶೇ.80 ರ ಸಹಾಯಧನವನ್ನು ಇಲಾಖಾ ಮಾರ್ಗಸೂಚಿಯಂತೆ ನೀಡುವುದು.
11. ಪ್ರತಿ ಕೇಂದ್ರಕ್ಕೆ ಶೇ.80 ರವರಗೆ ಗರಿಷ್ಠ ರೂ.8.00 ಲಕ್ಷ ಸಹಾಯಧನವನ್ನು ಒದಗಿಸುವುದು.
12. ಸ್ಥಾಪಿಸಿದ ಕೇಂದ್ರಗಳಲ್ಲಿರುವ ಉಪಕರಣಗಳನ್ನು ಸದಸ್ಯ ರೈತರಿಗೆ ನಿಗದಿಪಡಿಸಿದ ಬಾಡಿಗೆ ಆಧಾರದ ಮೇಲೆ ಯಂತ್ರೋಪಕರಣಗಳನ್ನು ಒದಗಿಸುವುದು.
13. ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನದಡಿ ಗ್ರಾಮ ಪಂಚಾಯ್ತಿಗಳಲ್ಲಿ ನೇಮಿಸಿರುವ ಕೃಷಿ ಸಖಿ ಇವರ ಸಹಾಯವನ್ನು ಸಹ ಪಡೆಯುವುದು.
14. ಸಮೀಪದ ಹೋಬಳಿಗಳಲ್ಲಿ ಸ್ಥಾಪಿಸಲಾದ ಕೃಷಿ ಯಂತ್ರೋಪಕರಣಗಳ ಕೃಷಿ ಯಂತ್ರಧಾರೆ ಕೇಂದ್ರಗಳಲ್ಲಿನ ಉಪಕರಣಗಳು ಹಾಗೂ ಯಂತ್ರೋಪಕರಣಗಳನ್ನು ಬಳಸಿಕೊಂಡು ಅದೇ ಗ್ರಾಮದಲ್ಲಿ ದೊಡ್ಡ ಪ್ರಮಾಣದ ಯಾಂತ್ರೀಕೃತ ಕೃಷಿ ಚಟುವಟಿಕೆಗಳ ಪ್ರಾತ್ಯಕ್ಷಿಕೆಗಳನ್ನು ಕೈಗೊಳ್ಳುವುದು.
15. ಸದರಿ ಸಂಘ ಸಂಸ್ಥೆಗಳಲ್ಲಿ ಸಹಕಾರ ಸಂಘದ ನಿಯಮದಡಿ ಸರ್ಕಾರದ ನಿಯಮಾನುಸಾರ ಪ.ಜಾ./ಪ.ಪಂ/ಹಿಂದುಳಿದ ವರ್ಗಗಳಿಗೆ ಪ್ರಾತಿನಿಧ್ಯ ಹೊಂದಿರತಕ್ಕದ್ದು.
16. Farm Machinery Banks ಗಳನ್ನು ಎಲ್ಲಾ ವ್ಯವಹಾರವು ಸದರಿ ಸಂಘ ಸಂಸ್ಥೆಯ ಬ್ಯಾಂಕ್ ಖಾತೆಯ ಮುಖಾಂತರವೇ ನಿರ್ವಹಿಸಿ ಪ್ರತ್ಯೇಕವಾದ ವಹಿಯಲ್ಲಿ ವ್ಯವಹರಿಸತಕ್ಕದ್ದು.
17. ಪ್ರತಿ ಮೂರು ತಿಂಗಳಿಗೊಮ್ಮೆ ಸದರಿ Farm Machinery Banks ಗಳ ವಹಿವಾಟಿಗೆ ನಿರ್ವಹಿಸುತ್ತಿರುವ ವಹಿಯನ್ನು ಮತ್ತು Farm Machinery Banks ಗಳ ಕಾರ್ಯ ಚಟುವಟಿಕೆಗಳನ್ನು ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕರು ಪರಿಶೀಲಿಸುವುದು.
18. ಕಡ್ಡಾಯವಾಗಿ ಟ್ರ್ಯಾಕ್ಟರ್ ಗಳನ್ನು ಸಂಘ ಸಂಸ್ಥೆಯ ಹೆಸರಿಗೆ ನೋಂದಣಿ ಮಾಡಬೇಕು.
19. Farm Machinery Banks ಗಳಲ್ಲಿ ಇರುವ ಉಪಕರಣಗಳ ಮೇಲೆ ಕೃಷಿ ಇಲಾಖೆಯ ಸಹಾಯಧನದಡಿ ಪಡೆದಿರುತ್ತದೆ ಹಾಗೂ ಸಂಘದ ಹೆಸರನ್ನು ಕಡ್ಡಾಯವಾಗಿ ನಮೂದಿಸತಕ್ಕದ್ದು.

**ಕೃಷಿ ಯಾಂತ್ರೀಕರಣ & ಕೃಷಿ ಸಂಸ್ಕರಣೆ ಯೋಜನೆಯಡಿ ಅನುಮೋದಿತಗೊಂಡ ಸಂಸ್ಥೆಗಳು ಸರಬರಾಜು ಮಾಡುವ ಮತ್ತು ಸರಬರಾಜು ನಂತರದ ಸೇವೆಗಳ ಕುರಿತು ಸೂಚನೆಗಳು :**

1. ಕೇಂದ್ರ ಕಛೇರಿಯಿಂದ ಅರ್ಹಗೊಂಡ ಸರಬರಾಜುದಾರರು ಕೇಂದ್ರ ಕಚೇರಿಯಿಂದ ಅನುಮೋದಿತ ಸರಬರಾಜುದಾರರ ಬ್ಯಾಂಕ್ ಖಾತೆಗೆ ಮಾತ್ರ ರಿಸಿಪಿಯಂಟ್ ಐ.ಡಿಯನ್ನು ಜೋಡಣೆ ಮಾಡಿಸಿಕೊಳ್ಳುವುದು. ಸಂಸ್ಥೆವಾರು ನೀಡಿದ ಬ್ಯಾಂಕ್ ಖಾತೆಗೆ ರೈತರ ವಂತಿಕೆ ಮತ್ತು ಸಹಾಯಧನವನ್ನು ಪಾವತಿಸಲು ಕ್ರಮಕೈಗೊಳ್ಳುವುದು.
2. RFP ನಲ್ಲಿ ಸೂಚಿಸಿರುವ ಮಾನದಂಡಗಳಿಗೆ ಅನುಗುಣವಾಗಿ ಯಂತ್ರೋಪಕರಣಗಳನ್ನು ಸರಬರಾಜು ಮಾಡುವುದು. ಈ ಬಗ್ಗೆ ಸಂಬಂಧಿಸಿದ ಅಧಿಕಾರಿಗಳು ಸೂಕ್ತ ಕ್ರಮವಹಿಸುವುದು.
3. ಸರಬರಾಜು ಮಾಡಿದ ಯಂತ್ರೋಪಕರಣಗಳ ಮೇಲೆ Centalized coding ಅನ್ನು ಕಡ್ಡಾಯವಾಗಿ ನಮೂದಿಸುವುದು.
4. ಸಂಬಂಧಪಟ್ಟ ದರ ಕರಾರು ಹೊಂದಿರುವವರು ಜಿಲ್ಲಾ ಅಥವಾ ತಾಲ್ಲೂಕು ಸೇವಾ ಕೇಂದ್ರಗಳ ಮಾಹಿತಿ ಮತ್ತು ದೂರವಾಣಿ ಸಂಖ್ಯೆಯನ್ನು ಸಂಬಂಧಿಸಿದ ತಾಲ್ಲೂಕು ಸ.ಕೃ.ನಿ ಯವರಿಗೆ ಕಡ್ಡಾಯವಾಗಿ ನೀಡುವುದು ಮತ್ತು ರೈತರಿಗೆ ಅವಶ್ಯವಿರುವಾಗ ಮಾಹಿತಿ ನೀಡುವುದು.
5. ಅರ್ಹ ಸಂಸ್ಥೆಗಳು RFP ಯಲ್ಲಿ ನಿಗಧಿಪಡಿಸಿದ Specifications ಅನ್ವಯ ಉಪಕರಣಗಳನ್ನು ಪೂರೈಸತಕ್ಕದ್ದು ಮತ್ತು 12 ತಿಂಗಳ ಅವಧಿಗೆ Warranty ನೀಡುವುದರೊಂದಿಗೆ ಸಂಬಂಧಿಸಿದ ಉಪಕರಣಗಳ ಬಿಡಿಭಾಗಗಳು ತಾಲ್ಲೂಕು ಹಂತದಲ್ಲಿ ದೊರೆಯುವಂತೆ ಕ್ರಮ ಕೈಗೊಳ್ಳುವುದು. ರೈತರಿಗೆ ಬಿಡಿಭಾಗಗಳ ಅವಶ್ಯಕತೆ ಇದ್ದರೆ ಅರ್ಹ ಸಂಸ್ಥೆಗಳು ಒಪ್ಪಿದ ಬೆಲೆಗೆ Warranty ನೀಡಿ ಬಿಡಿ ಭಾಗಗಳನ್ನು ಪೂರೈಸತಕ್ಕದ್ದು.
6. ಒಂದು ವೇಳೆ ರೈತರಿಂದ ತಯಾರಿಕ ನ್ಯೂನ್ಯತೆಗಳು / ದೋಷಗಳು ಕಂಡು ಬಂದಿರುವುದಾಗಿ ವರದಿ ನೀಡಿದ್ದಲ್ಲಿ ಸಂಬಂಧಪಟ್ಟ ಸಂಸ್ಥೆಗಳು ಆ defected ಉಪಕರಣವನ್ನು ತೆಗೆದುಕೊಂಡು ಹೋಗಿ ರಿಪೇರಿ ಮಾಡಿಕೊಡುವುದು / ಬದಲಿಸಿ ಬೇರೆ ಉಪಕರಣವನ್ನು ನಿಗಧಿತ ಸ್ಥಳಕ್ಕೆ ನೀಡಬೇಕಾಗಿರುತ್ತದೆ.
7. ಉಪಕರಣಗಳೊಂದಿಗೆ ಉಪಯೋಗಿಸುವ ವಿಧಾನದ ಕೈಪಿಡಿಯನ್ನು (Users manual) ಹಾಗು ಅಳತೆ / Specification ಗಳನ್ನು ಒದಗಿಸಿರುವ ಬಗ್ಗೆ ಮತ್ತು ಉಪಕರಣಗಳ ಪ್ರಾತ್ಯಕ್ಷಿಕೆಯನ್ನು ಏರ್ಪಡಿಸಿರುವ ಬಗ್ಗೆ ಖಾತರಿ ಪಡಿಸಿಕೊಳ್ಳುವುದು.
8. ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕರಿಂದ ಕಾರ್ಯಾದೇಶ ಪಡೆದ ಸಂಸ್ಥೆಗಳು **ಹತ್ತು** ದಿನದೊಳಗೆ ಕೃಷಿ ಉಪಕರಣಗಳನ್ನು ಸರಬರಾಜು ಮಾಡುವುದು. ಒಂದು ವೇಳೆ ಕಾರ್ಯಾದೇಶ ಪಡೆದು ಕೃಷಿ ಉಪಕರಣಗಳನ್ನು ಪೂರೈಸಲು ವಿಫಲವಾದ ಪ್ರಕರಣಗಳು **10 ಬಾರಿ** ಪುನರ್ವತನೆಯಾದಲ್ಲಿ, ಅಂತಹ ಸಂಸ್ಥೆಗಳ ವಿರುದ್ಧ RFP ಯ ಉಲ್ಲಂಘನೆ ಎಂದು ಪರಿಗಣಿಸಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು. ಆದ್ದರಿಂದ ಅಂತಹ ಪ್ರಕರಣಗಳು ಜರುಗಿದ್ದಲ್ಲಿ ಕೂಡಲೇ ಕೇಂದ್ರ ಕಛೇರಿಗೆ ಲಿಖಿತವಾಗಿ ಮಾಹಿತಿ ಸಲ್ಲಿಸುವುದು.
9. ಸರಬರಾಜುದಾರರು ಉಪಕರಣ ಸರಬರಾಜು ಮಾಡುವಾಗ ಪ್ರತಿ ಉಪಕರಣಗಳ ಮೇಲೆ**"2025-26 ಸಾಲಿನಲ್ಲಿ ಕೃಷಿ ಇಲಾಖಾ ಸಹಾಯಧನ ಪಡೆಯಲಾಗಿದೆ"** ಎಂದು ಮುದ್ರಿಸಿರುವುದನ್ನು ಕಡ್ಡಾಯವಾಗಿ ಖಾತರಿ ಪಡಿಸಿಕೊಂಡು ತದನಂತರ

ಸರಬರಾಜು ಮಾಡುವುದು. **ಉಪಕರಣದ ಮಾದರಿ ಮೇಲೆ ರಿವೀಟ್ ಅಥವಾ ಎಂಬೋಸ್ ಮಾಡುವ ಮಾಹಿತಿ ವಿವರಗಳು.**

a. ಸಂಬಂಧಿಸಿದ ಸಂಸ್ಥೆಯ ಹೆಸರು ಮತ್ತು ಬ್ರಾಂಡ್.
b. Centralized ಕೋಡ್/ಯೂನಿಕ್ ಕೋಡ್ System (Ex: Manufacturing State Code/Manufacturer ID/Centralized Implement Code/Year of Manufacturing /Serial number of machines Manufacturerd.
c. Specification ವಿವರಗಳು ಹಾಗು ಇತರೆ ಅಂಶಗಳುಳ್ಳ ಮಾಹಿತಿ.

10. **ಕೃಷಿ ಯಂತ್ರೋಪಕರಣಗಳು/ಕೃಷಿ ಸಂಸ್ಕರಣಾ ಘಟಕಗಳ ಮೇಲೆ Centralized Coding System ಅಳವಡಿಕೆ: (Tractor & Combined Harvester ಹೊರತು ಪಡಿಸಿ.)**
    1. ಕೃಷಿ ಯಂತ್ರೋಪಕರಣ/ಸಂಸ್ಕರಣಾ ಘಟಕಗಳ ಮೊತ್ತವು ರೂ. ಒಂದು ಲಕ್ಷ ಮತ್ತು ಅದಕ್ಕಿಂತ ಅಧಿಕವಿದ್ದಲ್ಲಿ Centralized Coding System ಅನ್ನು ಉಪಕರಣದ ಮೇಲೆ ಲೇಸರ್ ಕಟ್ ಮಾಡುವುದು.
    2. ಒಂದು ವೇಳೆ ಉಪಕರಣ/ಸಂಸ್ಕರಣಾ ಘಟಕಗಳ ಮೊತ್ತವು ಒಂದು ಲಕ್ಷಕ್ಕಿಂತ ಕಡಿಮೆ ಇದ್ದಲ್ಲಿ Centralized Coding System ಅನ್ನು Engrave ಮಾಡಿ ಸರಬರಾಜು ಮಾಡಬೇಕಾಗಿರುತ್ತದೆ.
    3. Centralized ಕೋಡ್ ಜೊತೆಗೆ ಉಪಕರಣಗಳ ಮೇಲೆ Specification Plate ಅನ್ನೂ ಸಹ ರೀವಿಟ್ ಮಾಡುವುದು.
11. ಇಂಜಿನ್ / ಮೋಟಾರ್ ಚಾಲಿತ ಕೃಷಿ ಯಂತ್ರೋಪಕರಣ / ಕೃಷಿ ಸಂಸ್ಕರಣಾ ಘಟಕಗಳ ಇಂಜಿನ್ / ಮೋಟಾರ್‌ನ್ನು ಹಾಗೂ ಘಟಕವನ್ನು ಪ್ರತ್ಯೇಕವಾಗಿ ಸರಬರಾಜು ಮಾಡುವ ಸಂದರ್ಭಗಳಲ್ಲಿ, ಇಂಜಿನ್ / ಮೋಟಾರ್ ಮೇಲೆ ಕಡ್ಡಾಯವಾಗಿ **ISI** ಗುರುತು ಹೊಂದಿರುವುದನ್ನು ಖಾತರಿಪಡಿಸಿಕೊಳ್ಳುವುದು.
12. ಕೇಂದ್ರ ಸರ್ಕಾರದ ಪತ್ರದ ಸಂ: F.No.3-4/2020 M&T (I&P) (81291), ದಿನಾಂಕ:02.05.2023 ರ ಅನ್ವಯ ಟ್ರ್ಯಾಕ್ಟರ್, ಪವರ್ ಟಿಲ್ಲರ್, ಕಂಬೈನ್ಡ್ ಹಾರ್ವೆಸ್ಟರ್, ಕಬ್ಬು ಕಟಾವು ಯಂತ್ರ, ಭತ್ತ ನಾಟಿ ಮಾಡುವ ಯಂತ್ರ, ರೀಪರ್ ಗಳು ಮುಂತಾದ ಯಂತ್ರೋಪಕರಣಗಳನ್ನೊಳಗೊಂಡಂತೆ ರೂ.1.00 ಲಕ್ಷ ಕ್ಕಿಂತ ಹೆಚ್ಚಿನ ದರಗಳಿರುವ ಎಲ್ಲಾ ಸ್ವಯಂ ಚಾಲಿತ ಯಂತ್ರೋಪಕರಣಗಳಿಗೆ ಕಡ್ಡಾಯವಾಗಿ ISI Powered telematic ಕಿಟ್ ಅನ್ನು Standard Attachment ಆಗಿ ಒದಗಿಸಿರುವುದನ್ನು ಖಾತ್ರಿ ಪಡಿಸಿಕೊಳ್ಳುವುದು.

D. **<u>ಟಾರ್ಪಾಲಿನ್ ಗಳ ವಿತರಣೆಗೆ ಸಂಬಂಧಿಸಿದಂತೆ ಪಾಲಿಸಬೇಕಾದ ಅಂಶಗಳು:</u>**

1. ರೈತರಿಗೆ ವಿತರಿಸಲು ರೈ.ಸಂ.ಕೇ.ಗಳಿಗೆ ಸರಬರಾಜು ಮಾಡುವ ಟಾರ್ಪಾಲಿನ್ ಗಳ ಮೇಲೆ ಕಡ್ಡಾಯಾವಾಗಿ "**Provided by Government of Karnataka, and Agriculture Department**" / "ಕರ್ನಾಟಕ ಸರ್ಕಾರ, ಕೃಷಿ ಇಲಾಖೆಯಿಂದ ಒದಗಿಸಲಾಗಿದೆ" ಎಂಬುವುದರ ಜೊತೆಗೆ ತಯಾರಕ ಸಂಸ್ಥೆಯ ಹೆಸರು, ಬ್ಯಾಚ್ ಸಂಖ್ಯೆ ಮತ್ತು BIS ಪರವಾನಿಗೆಯ CM/L ಸಂಖ್ಯೆಯನ್ನು ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿ ಟಾರ್ಪಾಲಿನ್ ನ ಉದ್ದಕ್ಕೆ ಸಮನಾಂತರವಾಗಿ ಲೇಜರ್ ಪ್ರಿಂಟ್ ಅಥವಾ ಅಳಿಸಲಾರದ ಶಾಹಿಯಲ್ಲಿ ಮುದ್ರಿಸಿರುವ ಟಾರ್ಪಾಲಿನ್‌ಗಳನ್ನು ಮಾತ್ರ ರೈತರಿಗೆ ವಿತರಿಸುವುದು.
2. ಸರಬರಾಜಾದ ಟಾರ್ಪಲೀನ್‌ಗಳಿಗೆ ಸರಬರಾಜು ಮಾಡಿದ ನಂತರ **ಆರು(06)** ತಿಂಗಳವರೆಗೆ ವಾರಂಟಿಯನ್ನು ನೀಡುವುದು.

3. ಮೂರು (3) ವರ್ಷಗಳಿಗೆ ಒಮ್ಮೆ ಮಾತ್ರ ಒರ್ವ ರೈತರಿಗೆ ಒಂದು ಟಾರ್ಪಾಲಿನ್ ಅನ್ನು ಸಹಾಯಧನದಡಿ ವಿತರಿಸುವುದು.
4. ಟಾರ್ಪಾಲಿನ್‌ಗಳನ್ನು ಸರಬರಾಜು ಮಾಡುವ ಸಂಸ್ಥೆಗಳ BIS ಪರವಾನಿಗೆ ಅವಧಿಯನ್ನು ಪರಿಶೀಲಿಸಿದ ನಂತರವೇ ಟಾರ್ಪಾಲಿನ್‌ಗಳನ್ನು ಪಡೆದು ವಿತರಿಸುವುದು. BIS ಅವಧಿ ಮುಗಿದ ಸಂಸ್ಥೆಗಳ ಟಾರ್ಪಾಲಿನ್‌ಗಳನ್ನು ನವೀಕೃತ ವರದಿ ಬಂದ ನಂತರವಷ್ಟೇ ವಿತರಿಸಲು ಕ್ರಮ ವಹಿಸುವುದು.
5. ಸರಬರಾಜು ಸಂಸ್ಥೆಯು ಡೆಲಿವರಿ ಚಲನ್, ಇ-ವೇ ಬಿಲ್ ಮತ್ತು ಸಹಾಯಧನದ ಬಿಲ್ಲನ್ನು ಕೆ-ಕಿಸಾನ್ ನಲ್ಲಿ ಅಪ್ಲೋಡ್ ಮಾಡುವುದು.

**ಈ ಮೇಲಿನ ಎಲ್ಲಾ ಅಂಶಗಳನ್ನು ಸಂಸ್ಥೆಗಳು ಉಲ್ಲಂಘಿಸಿದ್ದಲ್ಲಿ, ಅಂತಹ ಸಂಸ್ಥೆಗಳನ್ನು ದರ ಕರಾರು ಪಟ್ಟಿಯಿಂದ ರದ್ದುಪಡಿಸಲು ಕೇಂದ್ರ ಕಚೇರಿಗೆ ಪ್ರಸ್ತಾವನೆ ಸಲ್ಲಿಸುವುದು. ಅಂತಹ ಸಂಸ್ಥೆಗಳ ವಿರುದ್ಧ RFP ನಿಯಾಮಾನುಸಾರ ಕ್ರಮ ಕೈಗೊಳ್ಳಲಾಗುವುದು.**

E. **ಯೋಜನೆಗಳಡಿ ಸವಲತ್ತುಗಳನ್ನು ಪಡೆಯಲು ಅರ್ಜಿ ಸಲ್ಲಿಕೆ ವಿಧಾನ, ಸಲ್ಲಿಕೆಯಾಗಿರುವ ಅರ್ಜಿಗಳ ಪರಿಶೀಲನೆ ಮತ್ತು ಸಹಾಯಧನ ಮಂಜೂರಾತಿ :**

**a) ಯಂತ್ರೋಪಕರಣಗಳು/ಸಂಸ್ಕರಣಾ ಘಟಕಗಳ ವಿತರಣೆ:**

1. **FRUITS** (Farmers Registration and Unified Beneficiary Information System) Portal ತಂತ್ರಾಂಶದಲ್ಲಿ ನೊಂದಾಯಿತರಾದ ರೈತರು ಮಾತ್ರ ತಾವು ಇಚ್ಛಿಸುವ ಸವಲತ್ತಿಗೆ ಕೆ-ಕಿಸಾನ್ ತಂತ್ರಾಂಶದಲ್ಲಿ Citizen Centric login (kkisan.karnataka.gov.in) ಅಥವಾ ಸಂಬಂಧಪಟ್ಟ ರೈತ ಸಂಪರ್ಕ ಕೇಂದ್ರಗಳಲ್ಲಿ ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ.
2. ರೈತರು ರೈತ ಸಂಪರ್ಕ ಕೇಂದ್ರಗಳಿಗೆ ಅರ್ಜಿ ಸಲ್ಲಿಸಿದ್ದಲ್ಲಿ, ರೈತರು ಸಲ್ಲಿಸುವ ಅರ್ಜಿಗಳನ್ನು ಮತ್ತು ಅರ್ಜಿಗಳೊಂದಿಗೆ ಸಲ್ಲಿಸಿರುವ ಈ ಕೆಳಕಂಡ ದಾಖಲಾತಿಗಳನ್ನು ರೈತ ಸಂಪರ್ಕ ಕೇಂದ್ರದ ಅಧಿಕಾರಿಗಳು ಪರಿಶೀಲಿಸುವುದು.
   - ಅರ್ಜಿಯೊಂದಿಗೆ ಪಾಸ್ ಪೋರ್ಟ್ ಅಳತೆಯ ಫೋಟೋ,
   - ಪಹಣಿ,
   - ಜಾತಿ ಪ್ರಮಾಣ ಪತ್ರ (ಅವಶ್ಯಕತೆಯಿದ್ದಲ್ಲಿ),
   - ಟ್ರ್ಯಾಕ್ಟರ್ RC book (ಅವಶ್ಯಕತೆಯಿದ್ದಲ್ಲಿ),.
   - ಬ್ಯಾಂಕ್ ಖಾತೆಯ ವಿವರ,
   - ಸವಲತ್ತನ್ನು ಪಡೆಯಲು ಬ್ಯಾಂಕ್‌ನಿಂದ ಸಾಲ ಪಡೆದಿದ್ದಲ್ಲಿ, ಸಾಲ ಪಡೆದ ಬ್ಯಾಂಕಿನ ವಿವರ,
   - ರೈತರಿಂದ ನಿಗದಿತ ಮೊತ್ತದ ಛಾಪಾ ಕಾಗದದ ಮೇಲೆ ಪಡೆದ ಸವಲತ್ತನ್ನು ದುರುಪಯೋಗಪಡಿಸಿಕೊಳ್ಳುವುದಿಲ್ಲವೆಂದು ಹಾಗೂ ಪರಬಾರೆ ಮಾಡುವುದಿಲ್ಲವೆಂದು ಘೋಷಣಾ ಪತ್ರ,
   - ಜಂಟಿ ಖಾತೆಯಿದ್ದಲ್ಲಿ ವಾರಸುದಾರರ ವಂಶವೃಕ್ಷ ಮತ್ತು ನಿರಕ್ಷೇಪಣಾ ಪತ್ರ.
3. ಅರ್ಜಿ ಸಲ್ಲಿಸಿದ ಎಲ್ಲಾ ರೈತರಿಗೆ ಸ್ವೀಕೃತಿ ಪತ್ರವನ್ನು ನೀಡುವುದು ಹಾಗೂ ಸ್ವೀಕೃತವಾದ ಎಲ್ಲಾ ಅರ್ಜಿಗಳ ವಿವರಗಳನ್ನು ಜೇಷ್ಠತೆಯಲ್ಲಿ ಒಂದು ಪ್ರತ್ಯೇಕ ವಹಿಯಲ್ಲಿ ರೈತ ಸಂಪರ್ಕ ಕೇಂದ್ರದಲ್ಲಿ ದಾಖಲಿಸುವುದು.

4. ಜೇಷ್ಠತೆ ಆಧಾರದ ಮೇಲೆ ಅರ್ಜಿಗಳನ್ನು ಪರಿಶೀಲಿಸಿ ಅರ್ಜಿಗಳೊಂದಿಗೆ ಸಲ್ಲಿಸಿರುವ ದಾಖಲಾತಿಗಳು ತೃಪ್ತಿಕರವಾಗಿದ್ದಲ್ಲಿ, ಸದರಿ ಅರ್ಜಿಯನ್ನು ಕೆ-ಕಿಸಾನ ಪೋರ್ಟಲ್ ನ RSK Login ID ಯಲ್ಲಿ ಅಪ್ಲೋಡ್ ಮಾಡಿ ಸ.ಕೃ.ನಿ ಲಾಗಿನ್ ಐಡಿಗೆ ರವಾನಿಸುವುದು. ತೃಪ್ತಿಕರವಾಗಿಲ್ಲದ್ದಲ್ಲಿ ಅರ್ಜಿಯನ್ನು ತಿರಸ್ಕರಿಸಿ ಸಂಬಂಧಿಸಿದವರಿಗೆ ಮಾಹಿತಿ ನೀಡುವುದು.
5. ಸ.ಕೃ.ನಿ ಕಛೇರಿ ಅಧಿಕಾರಿಗಳು ತಮ್ಮ ಲಾಗಿನ್ ಐಡಿಗೆ ಸ್ವೀಕೃತವಾಗುವ ಅರ್ಜಿಗಳನ್ನು ಪರಿಶೀಲಿಸುವುದು. ಪರಿಶೀಲಿಸಿದ ಅರ್ಜಿಗಳು ತೃಪ್ತಿಕರವಾಗಿದ್ದಲ್ಲಿ ಜೇಷ್ಠತಾ ಆಧಾರದ ಮೇಲೆ ಅರ್ಹಗೊಂಡ ರೈತರಿಂದ ಸದರಿ ಘಟಕಕ್ಕೆ ಇತರೆ ಇಲಾಖೆಗಳಾದ ತೋಟಗಾರಿಕೆ/ರೇಷ್ಮೆ ಇಲಾಖೆಯಿಂದ ಸಹಾಯಧನ ಪಡೆದಿರುವುದಿಲ್ಲವೆಂಬ ದೃಢೀಕರಣ ಪತ್ರದ ದಾಖಲಾತಿಗಳನ್ನು ಪಡೆದು ಯೋಜನೆವಾರು ಕ್ರಿಯಾ ಯೋಜನೆ ಅನ್ವಯ ಕೆ- ಕಿಸಾನ್ ನಲ್ಲಿ ನೀಡಿದ ಗುರಿಗಳ ಮಿತಿಗೊಳಪಟ್ಟು (ಮುಂಚಿತ ಅನುದಾನ ಬಿಡುಗಡೆಗೆ ಕಾಯದೇ) ರೈತರನ್ನು ಆಯ್ಕೆ ಮಾಡಿ ಸಂಬಂಧಿಸಿದ ರೈತರಿಗೆ ತಮ್ಮ ಭಾಗದ ಮೊತ್ತವನ್ನು (ಪೂರ್ಣ ಮೊತ್ತ/ರೈತರ ವಂತಿಕೆ ಮಾತ್ರ) ಹತ್ತು ದಿನದೊಳಗಾಗಿ ಸಂಬಂಧಿಸಿದ ಸರಬರಾಜುದಾರರ ಬ್ಯಾಂಕ್ ಖಾತೆಗೆ ಜಮಾ ಮಾಡಲು ಸೂಚಿಸುವುದು. **(ಅನುಬಂಧ-1)**
6. ಆಯ್ಕೆ ಮಾಡಿದ ರೈತರು ತಮ್ಮ ಭಾಗದ ಮೊತ್ತವನ್ನು ತಮ್ಮ ಸ್ವಂತ ಬ್ಯಾಂಕ್ ಖಾತೆಯ ಮುಖಾಂತರ (ಪೂರ್ಣ ಮೊತ್ತ/ರೈತರ ವಂತಿಕೆ ಮಾತ್ರ) ಹತ್ತು ದಿನದೊಳಗಾಗಿ ಸಂಬಂಧಿಸಿದ ಸರಬರಾಜುದಾರರ ಬ್ಯಾಂಕ್ ಖಾತೆಗೆ ಜಮಾ ಮಾಡದಿದ್ದಲ್ಲಿ ಸದರಿಯವರನ್ನು Pending list ನಲ್ಲಿ ಇಟ್ಟು ಮುಂದಿನ ಜೇಷ್ಠತೆ ಹೊಂದಿರುವ ರೈತರನ್ನು ಆಯ್ಕೆ ಮಾಡುವುದು.
7. ಒಂದು ವೇಳೆ ರೈತರು ಸಲ್ಲಿಸಿರುವ ಅರ್ಜಿಗೆ ಸಂಬಂಧಿಸಿದಂತೆ ಕೆಲವು ಮಾರ್ಪಾಡುಗಳನ್ನು ಕೋರಿದಲ್ಲಿ, ರೈತರ ವಂತಿಕೆ ಪಾವತಿಸಿದ challan entry ಮಾಡುವ ಮುನ್ನ, ಸ.ಕೃ.ನಿ ಲಾಗಿನ್ ಐಡಿಯಲ್ಲಿ ಮಾರ್ಪಾಡುಗಳನ್ನು ಮಾಡಲು ಅವಕಾಶ ಕಲ್ಪಿಸಲಾಗಿರುತ್ತದೆ. ಅದರಂತೆ, ಸಂಬಂಧಿಸಿದ ರೈತರಿಂದ ಒಪ್ಪಿಗೆ ಪತ್ರ ಪಡೆದು **(ಅನುಬಂಧ-2)** ಸೂಕ್ತ ಕ್ರಮಕೈಗೊಳ್ಳುವುದು.
8. Pending list ನಲ್ಲಿ ಇಟ್ಟಿರುವ ರೈತರು ತಮ್ಮ ಭಾಗದ ಮೊತ್ತವನ್ನು ಪಾವತಿಸಲು ಮುಂದೆ ಬಂದಾಗ ಕ್ರಿಯಾ ಯೋಜನೆಗೆ ಒಳಪಟ್ಟು ಸದರಿ ರೈತರನ್ನು ಪರಿಗಣಿಸಿ ತಮ್ಮ ಭಾಗದ ಮೊತ್ತವನ್ನು ಪಾವತಿಸಲು ಅನುವು ಮಾಡಿಕೊಡುವುದು.
9. ಒಂದು ವೇಳೆ SCP/TSP ಯೋಜನೆಗಳಡಿ, ಅನುದಾನ ಕೊರತೆಯಿಂದ, SC/ST ವರ್ಗದ ರೈತರು ಸಾಮಾನ್ಯ ಯೋಜನೆಯಡಿ ಸವಲತ್ತು ಪಡೆಯಲು ಇಚ್ಛಿಸಿದ್ದಲ್ಲಿ, ಸ.ಕೃ.ನಿ ಲಾಗಿನ್ ಐಡಿಯಲ್ಲಿ ಇಂತಹ ರೈತರ ಅರ್ಜಿಯನ್ನು ಸಾಮಾನ್ಯ ಯೋಜನೆಯಡಿ ಪರಿಗಣಿಸಲು ಸೂಕ್ತ ಮಾರ್ಪಾಡುಗಳನ್ನು ಮಾಡಬಹುದಾಗಿರುತ್ತದೆ. ಅದರಂತೆ, ಸಂಬಂಧಿಸಿದ ರೈತರಿಂದ **(ಅನುಬಂಧ-3)** ರಲ್ಲಿರುವಂತೆ ಒಪ್ಪಿಗೆ ಪತ್ರ ಪಡೆದು, ಸೂಕ್ತ ಕ್ರಮ ಕೈಗೊಳ್ಳುವುದು ಮತ್ತು ಸಾಮಾನ್ಯ ವರ್ಗದವರಿಗೆ ನಿಗಧಿಪಡಿಸಿದ ಶೇ.50 ರಷ್ಟು ಸಹಾಯಧನ ಮಾತ್ರ ಪಾವತಿ ಮಾಡುವುದು.
10. ತಾಲ್ಲೂಕು ಸ.ಕೃ.ನಿ ಯವರು ರೈತರು ದರ ಕರಾರು ಹೊಂದಿರುವ (Rate Contract holder) ಸಂಸ್ಥೆಯ ಖಾತೆಗೆ ಜಮೆ ಮಾಡಿರುವ ದಾಖಲಾತಿಗಳಾದ ಬ್ಯಾಂಕ್ ಚಲನ್/ಬ್ಯಾಂಕ್ ಪಾಸ್ ಬುಕ್ ಜೆರಾಕ್ಸ್ ಪ್ರತಿಯನ್ನು ಪಡೆದು UTR/Challan ಸಂಖ್ಯೆಯನ್ನು ಕೆ- ಕಿಸಾನ್ ನಲ್ಲಿ ಅಪ್ಲೋಡ್ ಮಾಡಿ ಸಂಬಂಧಿಸಿದ ದರ ಕರಾರು ಹೊಂದಿರುವ ಸಂಸ್ಥೆಗೆ ಸರಬರಾಜು ಆದೇಶವನ್ನು ನೀಡುವುದು. **(ಅನುಬಂಧ-4)**

11. ಸಹಾಯಕ ಕೃಷಿ ನಿರ್ದೇಶಕರು ಯಂತ್ರೋಪಕರಣಗಳು ನಿಯಾಮಾನುಸಾರ ವಿತರಣೆಯಾಗಿದ್ದರೆ ಸರ್ಕಾರದ ಸಹಾಯಧನವನ್ನು ಸರ್ಕಾರದ ಆದೇಶ ಸಂ: ಕೃಇ 100 ಕೃಮಸ 2018, ದಿನಾಂಕ: 04.10.2018 ರನ್ವಯ ರೈತರು ಉಪಕರಣದ ಪೂರ್ಣ ಮೌಲ್ಯವನ್ನು ಪಾವತಿಸಿದ್ದಲ್ಲಿ, ಸಹಾಯಧನವನ್ನು ರೈತರ ಬ್ಯಾಂಕ್ ಖಾತೆಗೆ ಜಮೆ ಮಾಡುವುದು. ಒಂದು ವೇಳೆ ರೈತರು ಬ್ಯಾಂಕ್ ನಿಂದ ಸಾಲ ಪಡೆದು ಉಪಕರಣದ ಪೂರ್ಣ ಮೌಲ್ಯವನ್ನು ದರ ಕರಾರು ಹೊಂದಿರುವ ಸಂಸ್ಥೆಗೆ ಪಾವತಿಸಿದ್ದಲ್ಲಿ, ರೈತರ ಸಾಲದ ಖಾತೆಗೆ ಜಮೆ ಮಾಡುವುದು. ಒಂದು ವೇಳೆ ರೈತರು ತಮ್ಮ ವಂತಿಕೆಯನ್ನು ಮಾತ್ರ ಪಾವತಿಸದಿದ್ದಲ್ಲಿ, ರೈತರು ನೀಡಿರುವ Authorization letter **(ಅನುಬಂಧ - 5)** ಆಧಾರದ ಮೇಲೆ ಸಂಬಂಧಪಟ್ಟ ದರ ಕರಾರು ಹೊಂದಿರುವ ಸಂಸ್ಥೆಗಳು (Rate Contract holder Account) ಬ್ಯಾಂಕ್ ಖಾತೆಗೆ ಜಮೆ ಮಾಡುವುದು.

12. ರೈತರು ದೊಡ್ಡ ಉಪಕರಣಗಳನ್ನು ಪಡೆದಿದ್ದಲ್ಲಿ, ಇಲಾಖೆಯ ಅಧಿಕಾರಿಗಳು ಖುದ್ದಾಗಿ ಸ್ಥಳಕ್ಕೆ / ರೈತರ ತಾಕಿಗೆ ಭೇಟಿ ನೀಡಿ, ಮಹಜರ್ ಮಾಡಿ, ಸದರಿ ಉಪಕರಣಗಳು ಇಲಾಖೆ ನಿಗಧಿಪಡಿಸುವ ತಾಂತ್ರಿಕ ಮಾನದಂಡಗಳಂತೆ ಸರಬರಾಜು ಮಾಡಿರುವ ಬಗ್ಗೆ ಖಚಿತಪಡಿಸಿಕೊಂಡು- ರೈತ, ಉಪಕರಣ, ಇಲಾಖಾ ಅಧಿಕಾರಿಗಳು ಹಾಗೂ ಉಪಕರಣದ **Centralized Coding System** ವಿವರಗಳನ್ನು ಕೆ-ಕಿಸಾನ್ ಮೊಬೈಲ್ ಆಪ್ ನಲ್ಲಿ ಅಪ್ಲೋಡ್ ಮಾಡುವುದು. ಟ್ರ್ಯಾಕ್ಟರ್ ಚಾಲಿತ ಉಪಕರಣಗಳಾದಲ್ಲಿ ರೈತರು ಸಹಾಯಕ ಕೃಷಿ ನಿರ್ದೇಶಕರ ಕಛೇರಿಗೆ ನೊಂದಣಿ ಮಾಡಿಸಿದ ದಾಖಲಾತಿ (ಆರ್.ಸಿ ಬುಕ್) ರೈತರಿಂದ ಪಡೆದ ತೃಪ್ತಿಕರ ಪ್ರಮಾಣ ಪತ್ರ, ಸ್ಥಳ ಪರಿಶೀಲನಾ ವರದಿ, ಡೆಲವರಿ ಚಲನ್ (ಅಗತ್ಯವಿರುವೆಡೆ ಚಾಸಿಸ್ ನಂಬರ್ ಮತ್ತು ಎಂಜಿನ್ ನಂಬರ್) ನಮೂದಿಸುವುದು ಹಾಗೂ ಬಿಲ್ಲಿನೊಂದಿಗೆ ಸ.ಕೃ.ನಿ ಕಛೇರಿಗೆ ವರದಿ ನೀಡುವುದು.

13. ಕೃಷಿ ಯಂತ್ರೋಪಕರಣಗಳು/ಸಂಸ್ಕರಣಾ ಘಟಕಗಳ ಮೊತ್ತವು ರೂ. 1.00 ಲಕ್ಷ ಮತ್ತು ಅದಕ್ಕಿಂತ ಅಧಿಕವಿದ್ದಲ್ಲಿ Centralized Coding System ಅನ್ನು ಉಪಕರಣದ ಮೇಲೆ ಲೇಸರ್ ಕಟ್ ಮಾಡಿ ಸರಬರಾಜು ಮಾಡಿರುವುದನ್ನು ಪರಿಶೀಲಿಸುವುದು ಮತ್ತು Centralized Coding System ಅನ್ನು ಕೆ-ಕಿಸಾನ್ ತಂತ್ರಾಂಶದಲ್ಲಿ ನಮೂದಿಸುವುದು.

14. ಸರಬರಾಜು ಆದೇಶ ಪಡೆದ ಸಂಸ್ಥೆಗಳು ತನ್ನ ಕೆ-ಕಿಸಾನ್ ಲಾಗಿನ್ ನಲ್ಲಿ ಸಂಸ್ಥೆಯ ಡೆಲಿವರಿ ಚಲನ್, ಇ ವೇ ಬಿಲ್ ಮತ್ತು ಸಹಾಯಧನದ ಬಿಲ್ಲು ಹಾಗೂ ಫಲಾನುಭವಿ ತೃಪ್ತಿಕರ ಪ್ರಮಾಣ ಪತ್ರವನ್ನು **(ಅನುಬಂಧ-6)** ಕೆ-ಕಿಸಾನ್ ನಲ್ಲಿ ಅಪ್ಲೋಡ್ ಮಾಡುವುದು.

15. e way ಬಿಲ್ಲುಗಳ ಮೇಲೆ ಹಾಗೂ ಇಲಾಖೆಗೆ ಸಲ್ಲಿಸುವ Tax Invoice/Credit bill ಗಳ ಮೇಲೆ Centralized Coding System ಅನ್ನು ನಮೂದಿಸಿರುವುದನ್ನು ಪರಿಶೀಲಿಸುವುದು.

16. ಇಲಾಖಾ ಕಾರ್ಯಾದೇಶ ನೀಡಿದ ಮೇಲೆ ಉಪಕರಣಗಳ ವಿತರಣಾ ಸಮಯದಲ್ಲಿ ಮತ್ತು Post Inspection Stage ನಲ್ಲಿ Centralized ಕೋಡ್ ಅನ್ನು ಕಡ್ಡಾಯವಾಗಿ ನಮೂದಿಸಿರುವುದನ್ನು ಪರಿಶೀಲಿಸುವುದು.

17. Self propelled equipments ಗಳ ದರವು ಒಂದು ಲಕ್ಷಕ್ಕಿಂತ ಹೆಚ್ಚಿದ್ದಲ್ಲಿ AI-Powered telematics kit ಅನ್ನು ಉಪಕರಣದ ಜೊತೆಗೆ as standard attachment ಆಗಿ ನೀಡಬೇಕಾಗಿರುತ್ತದೆ. ಕೆ ಕಿಸಾನ್ app ನಲ್ಲಿ AI-Powered telematics kit ಅನ್ನು ಉಪಕರಣದ ಜೊತೆಗೆ as standard attachment ಆಗಿ ನೀಡಿರುವುದನ್ನು ಸರಬರಾಜು ಸಂಸ್ಥೆಗಳು ದೃಢೀಕರಿಸಿರುವುದನ್ನು ಪರಿಶೀಲಿಸುವುದು.

18. ರೈತ ಸಂಪರ್ಕ ಕೇಂದ್ರದ ಅಧಿಕಾರಿಗಳು ಕೆ-ಕಿಸಾನ್ ಮೊಬೈಲ್ ಆಪ್ ಮೂಲಕ ಕಾರ್ಯಾದೇಶ ಪಡೆದ ಸರಬರಾಜುದಾರರು ಸರಬರಾಜು ಮಾಡಿದ ಸವಲತ್ತನ್ನು ಶೇ. 100 ರಷ್ಟನ್ನು ಪರಿಶೀಲಿಸಿ ಪರಿಶೀಲನಾ ವರದಿ ಮತ್ತು ಸವಲತ್ತನ್ನು ಪಡೆದ ಫಲಾನುಭವಿ ಮತ್ತು ಸವಲತ್ತಿನೊಂದಿಗೆ ಜಿಯೋ ಟ್ಯಾಗ್ ಛಾಯ ಚಿತ್ರವನ್ನು ಸೆರೆ ಹಿಡಿದು, ಕೆ-ಕಿಸಾನ್ ಮೊಬೈಲ್ ಆಪ್ ನಲ್ಲಿ ಅಪ್ಲೋಡ್ ಮಾಡುವುದು.

19. ಸಹಾಯಕ ಕೃಷಿ ನಿರ್ದೇಶಕರು ಕೆ- ಕಿಸಾನ್ ಲಾಗಿನ್ ನಲ್ಲಿ ಅನುದಾನ ಬಿಡುಗಡೆ ಹಾಗೂ ದರ ಕರಾರು ಹೊಂದಿರುವ ಸಂಸ್ಥೆಯು ನೀಡಿರುವ ಬಿಲ್ ಆಧಾರದ ಮೇಲೆ ಕೆ-ಕಿಸಾನ್ ನಲ್ಲಿ ಡಿ.ಸಿ ಬಿಲ್ಲುಗಳನ್ನು ತಯಾರಿಸಿ ಮೇಲು ರುಜುವಿಗೆ ಸಂಬಂಧಿಸಿದ ಉ.ಕೃ.ನಿ ಗೆ ಸಲ್ಲಿಸುವುದು.

20. ಕೇಂದ್ರ ಪುರಸ್ಕೃತ (SMAM/RKVY) ಯೋಜನೆಗಳಡಿ PFMS ಮುಖಾಂತರ ವೆಚ್ಚ ಭರಿಸಲು ಕೆ-2 ನಲ್ಲಿ ಡಿ.ಸಿ ಬಿಲ್ಲನ್ನು ಸಿದ್ಧಪಡಿಸಿ ಮೇಲು ರುಜುವಿಗೆ ಸಂಬಂಧಿಸಿದ ಉ.ಕೃ.ನಿ ಗೆ ಸಲ್ಲಿಸುವುದು.

21. ರಾಜ್ಯವಲಯದ ಬಿಲ್ಲು/ಹೊಂದಾಣಿಕೆ ಬಿಲ್ಲುಗಳಿಗೆ ಸಂಬಂಧಿಸಿದಂತೆ, ಕೆ-ಕಿಸಾನ್ ನಲ್ಲಿ Updation ಕೈಗೊಂಡು ಡಿ.ಸಿ ಬಿಲ್ಲುಗಳನ್ನು ತಯಾರಿಸಿ ಹಾಗೂ ಕೆ-2 ನಲ್ಲಿ ಡಿ.ಸಿ ಬಿಲ್ಲನ್ನು ಸಿದ್ಧಪಡಿಸಿ, ಕೆ-ಕಿಸಾನ್ ಡಿ.ಸಿ ಬಿಲ್ಲಿನೊಂದಿಗೆ ಮೇಲು ರುಜುವಿಗೆ ಸಂಬಂಧಿಸಿದ ಉ.ಕೃ.ನಿ ಗೆ ಸಲ್ಲಿಸುವುದು.

22. ಉ.ಕೃ.ನಿ ಯವರು ಮೇಲು ರುಜು (ಕೆ-ಕಿಸಾನ್ ಒಳಗೊಂಡಂತೆ) ಮಾಡಿದ ನಂತರ, ಡಿ.ಸಿ ಬಿಲ್ಲುಗಳ ಆಧಾರದ ಮೇಲೆ ಕೇಂದ್ರ ಪುರಸ್ಕೃತ ಬಿಲ್ಲುಗಳಿಗೆ, PFMS portal ನಲ್ಲಿ ಸಂಬಂಧಪಟ್ಟ ರೈತರು ದರ ಕರಾರು ಹೊಂದಿದ/Rate contractor holder (Vendor) ಗೆ ಸಹಾಯಧನವನ್ನು ವರ್ಗಾಯಿಸಲು ತಾಲ್ಲೂಕು ಸ.ಕೃ.ನಿ ಯವರು ಕ್ರಮ ವಹಿಸುವುದು. ರಾಜ್ಯವಲಯದ ಬಿಲ್ಲುಗಳಿಗೆ ಕೆ-2 (ತಾಲ್ಲೂಕು ಹುಜೂರು ಖಜಾನೆ) ಗೆ ಸಲ್ಲಿಸಿ ಸಹಾಯಧನವನ್ನು ಸಂದರ್ಭೋಚಿತವಾಗಿ ಸಂಬಂಧಿಸಿದವರ ಖಾತೆಗೆ ವರ್ಗಾಯಿಸಲು ಕ್ರಮವಹಿಸುವುದು.

23. ಸ.ಕೃ.ನಿ. ಕಛೇರಿಯಲ್ಲಿನ ದಾಸ್ತಾನು ವಹಿಯಲ್ಲಿ ಬಿಲ್ಲಿನ ವಿವರಗಳನ್ನು ನಮೂದಿಸಿ ರೈತರ ಸಹಿಯನ್ನು ಪಡೆಯುವುದು.

24. ಕೆ-ಕಿಸಾನ್ ನಲ್ಲಿ ಉ.ಕೃ.ನಿ ಯವರು ಡಿ.ಸಿ ಬಿಲ್ಲು ಗಳನ್ನು ರುಜು ಮಾಡಿದ ನಂತರ ಸದರಿ ರೈತರು ಫಲಾನುಭವಿಗಳಾಗುತ್ತಾರೆ ಹಾಗೂ ಫಲಾನುಭವಿ ಪಟ್ಟಿ ಅಂತಿಮವಾಗುತ್ತದೆ.

**b) <u>ಟಾರ್ಪಾಲಿನ್ ಗಳ ವಿತರಣೆ:</u>**

1. ಜಿಲ್ಲೆಯ ಜಂಟಿ ಕೃಷಿ ನಿರ್ದೇಶಕರು ಕೇಂದ್ರ ಕಛೇರಿಯಿಂದ ನೀಡುವ ಕ್ರಿಯಾ ಯೋಜನೆಯಲ್ಲಿ ನೀಡಿದ ಪ್ರಮಾಣಕ್ಕೆ ಅನುಗುಣವಾಗಿ ತಾಲ್ಲೂಕುಗಳಿಗೆ ಹಂಚಿಕೆ ಮಾಡಿ, ತಾಲ್ಲೂಕುವಾರು ಸರಬರಾಜು ಮಾಡಲು ಅನುಮೋದಿತ ಸರಬರಾಜುದಾರರ ಸಂಸ್ಥೆಗಳಿಗೆ ಇಂಡೆಂಟ್ ನೀಡಿ, ಸದರಿ ಪ್ರತಿಯನ್ನು ತಾಲ್ಲೂಕು ಸ.ಕೃ.ನಿ ಯವರಿಗೆ ನೀಡಿ, ತಾಲ್ಲೂಕುವಾರು ಹಂಚಿಕೆ ಮಾಡಿದ ಪ್ರಮಾಣವನ್ನು ಕೆ-ಕಿಸಾನ್ ನಲ್ಲಿ ಅಪ್ಲೋಡ್ ಮಾಡುವುದು.

2. ಜ.ಕೃ.ನಿ ಯವರು ತಾಲ್ಲೂಕಿಗೆ ಹಂಚಿಕೆ ಮಾಡಿದ ಪ್ರಮಾಣವನ್ನು ತಾಲ್ಲೂಕು ಸ.ಕೃ.ನಿ. ಯವರು ಕೆ-ಕಿಸಾನ್ ನಲ್ಲಿ ರೈತ ಸಂಪರ್ಕ ಕೇಂದ್ರವಾರು ಹಂಚಿಕೆ ಮಾಡಿ, ಸರಬರಾಜುದಾರರಿಗೆ ರೈತ ಸಂಪರ್ಕ ಕೇಂದ್ರವಾರು ಸರಬರಾಜು ಮಾಡಲು ಆದೇಶ ನೀಡುವುದು.

3. ರೈತ ಸಂಪರ್ಕ ಕೇಂದ್ರದ ಅಧಿಕಾರಿಗಳು ಸರಬರಾಜುದಾರರಿಗೆ ನೀಡಲಾದ ಸರಬರಾಜು ಆದೇಶದನ್ವಯ ಸರಬರಾಜು ಸಂಸ್ಥೆಯಿಂದ ಸ್ವೀಕರಿಸಲಾದ ದಾಸ್ತಾನನ್ನು ಹಾಗೂ ವಿತರಣೆಯನ್ನು Distribution System ನಡಿ ಕೈಗೊಳ್ಳುವುದು.
4. ಸಹಾಯಕ ಕೃಷಿ ನಿರ್ದೇಶಕರು ಕೆ- ಕಿಸಾನ್ ಲಾಗಿನ್ ನಲ್ಲಿ ಅನುದಾನ ಬಿಡುಗಡೆ, ದರ ಕರಾರು ಹೊಂದಿರುವ ಸಂಸ್ಥೆಯು ನೀಡಿರುವ ಕ್ರೆಡಿಟ್ ಬಿಲ್ ಮತ್ತು ರೈತ ಸಂಪರ್ಕ ಕೇಂದ್ರದ ಅಧಿಕಾರಿಗಳು ಕೆ-ಕಿಸಾನ್ ನಲ್ಲಿ ಅಪ್ಲೋಡ್ ಮಾಡಿದ ಸ್ವೀಕೃತಿಯ ಪ್ರಮಾಣದ ಆಧಾರದ ಮೇಲೆ ಕೆ-ಕಿಸಾನ್ ನಲ್ಲಿ ಡಿ.ಸಿ ಬಿಲ್ಲುಗಳನ್ನು ತಯಾರಿಸಿ ಮೇಲು ರುಜುವಿಗೆ ಸಂಬಂಧಿಸಿದ ಉ.ಕೃ.ನಿ ಗೆ ಸಲ್ಲಿಸುವುದು.
5. ಕೇಂದ್ರ ಪುರಸ್ಕೃತ ಯೋಜನೆಗಳಡಿ ವೆಚ್ಚ ಭರಿಸಲು ಕೆ-2 ನಲ್ಲಿ ಡಿ.ಸಿ ಬಿಲ್ಲನ್ನು ಸಿದ್ಧಪಡಿಸಿ, ಕೆ-ಕಿಸಾನ್ ಡಿ.ಸಿ ಬಿಲ್ಲಿನೊಂದಿಗೆ ಮೇಲು ರುಜುವಿಗೆ ಸಂಬಂಧಿಸಿದ ಉ.ಕೃ.ನಿ ಗೆ ಸಲ್ಲಿಸುವುದು.
6. ರಾಜ್ಯವಲಯದ ಬಿಲ್ಲು/ಹೊಂದಾಣಿಕೆ ಬಿಲ್ಲುಗಳಿಗೆ ಸಂಬಂಧಿಸಿದಂತೆ, ಕೆ-ಕಿಸಾನ್ ನಲ್ಲಿ Updation ಕೈಗೊಂಡು ಡಿ.ಸಿ ಬಿಲ್ಲುಗಳನ್ನು ತಯಾರಿಸಿ ಹಾಗೂ ಕೆ-2 ನಲ್ಲಿ ಡಿ.ಸಿ ಬಿಲ್ಲನ್ನು ಸಿದ್ಧಪಡಿಸಿ, ಕೆ-ಕಿಸಾನ್ ಡಿ.ಸಿ ಬಿಲ್ಲಿನೊಂದಿಗೆ ಮೇಲು ರುಜುವಿಗೆ ಸಂಬಂಧಿಸಿದ ಉ.ಕೃ.ನಿ ಗೆ ಸಲ್ಲಿಸುವುದು.
7. ಉ.ಕೃ.ನಿ ಯವರು ಮೇಲು ರುಜು (ಕೆ-ಕಿಸಾನ್ ಒಳಗೊಂಡಂತೆ) ಮಾಡಿದ ನಂತರ ಕೇಂದ್ರ ಪುರಸ್ಕೃತ ಯೋಜನೆಗಳ ಬಿಲ್ಲುಗಳಿಗೆ, PFMS portal ನಲ್ಲಿ ಸಂಬಂಧಪಟ್ಟ ದರ ಕರಾರು ಹೊಂದಿದ / Rate contractor holder (Vendor) ಗೆ ಸಹಾಯಧನವನ್ನು ವರ್ಗಾಯಿಸಲು ಹಾಗೂ ರಾಜ್ಯವಲಯದ ಬಿಲ್ಲುಗಳಿಗೆ ಕೆ-2 (ತಾಲ್ಲೂಕು ಹುಜೂರು ಖಜಾನೆ) ಗೆ ಸಲ್ಲಿಸಿ ಸಹಾಯಧನವನ್ನು ಸಂಬಂಧಿಸಿದವರ ಖಾತೆಗೆ ವರ್ಗಾಯಿಸಲು ಕ್ರಮವಹಿಸುವುದು.
8. ಅನುಮೋದಿತ ಸಂಸ್ಥೆಗಳು ಜಿಲ್ಲಾವಾರು ಸರಬರಾಜು ಮಾಡಿದ ವಿವರಗಳನ್ನು ಕೇಂದ್ರ ಕಚೇರಿಗೆ ಸಲ್ಲಿಸುವುದು.
9. **ರೈತರ ವಂತಿಕೆಯನ್ನು, ರೈತರಿಗೆ ವಿತರಿಸಿದ 07 ದಿನಗಳೊಳಗಾಗಿ ಸಂಬಂಧಪಟ್ಟ ಸಂಸ್ಥೆಗಳಿಗೆ ಸಹಾಯಧನ ಪಾವತಿಸಲು ನೀಡಿದ ಬ್ಯಾಂಕ್ ಖಾತೆಗೆ ತಪ್ಪದೆ RTGS / NEFT ಮೂಲಕವೇ ಪಾವತಿಸುವುದು.**

**c) ಸಹಾಯಧನ ಪಾವತಿಸಲು ಮಾರ್ಗಸೂಚಿಗಳು :**

1. **ಏಕ ಬಿಲ್ಲಿನಲ್ಲಿ ಸಹಾಯಧನ ಪಾವತಿಸುವ ವಿಧಾನ**
   ಉಪಕರಣಗಳ ಮಾದರಿವಾರು ನಿಗದಿಪಡಿಸಿದ ಗರಿಷ್ಟ ಸಹಾಯಧನವು ಕೇಂದ್ರ ಪುರಸ್ಕೃತ ಯೋಜನೆಯಡಿ ನಿಗದಿಪಡಿಸಿದ ಸಹಾಯಧನದಲ್ಲೇ ಭರಿಸಲು ಅವಕಾಶವಿದ್ದಲ್ಲಿ ಅಂತಹ ಉಪಕರಣಗಳಿಗೆ ಸಹಾಯಧನವನ್ನು ಏಕ ಬಿಲ್ಲಿನಲ್ಲಿ ಪಾವತಿಸುವುದು.
2. **ಕೇಂದ್ರ (SMAM/NFSM) ಮತ್ತು ರಾಜ್ಯದ ಅನುದಾನವನ್ನು ಪೂರಕವಾಗಿ ಸಮನ್ವಯಗೊಳಿಸಿ ಕೊಡುವ ಸಂದರ್ಭದಲ್ಲಿ ಸಹಾಯಧನವನ್ನು ಪಾವತಿಸುವ ವಿಧಾನ/ಮಾರ್ಗಸೂಚಿ:**
   ಅ) ಬಿಲ್ಲಿನ ಮೇಲೆ ಒಟ್ಟು ಸಹಾಯಧನವನ್ನು ನಮೂದಿಸಿ ಅದರ ಕೆಳಗೆ ದರ ಕರಾರು ಪಟ್ಟಿಯಲ್ಲಿ ನೀಡಿದಂತೆ ಕೇಂದ್ರದ ಹಾಗೂ ರಾಜ್ಯದ ಸಹಾಯಧನವನ್ನು ಪ್ರತ್ಯೇಕವಾಗಿ ನಮೂದಿಸಿದ ಮೂಲ ಸಹಿಯುಳ್ಳ ಒಂದೇ ಬಿಲ್ಲಿನ 6 ಪ್ರತಿಗಳನ್ನು ಪಡೆಯುವುದು.

ಆ) ಕೇಂದ್ರದ ಹಾಗೂ ರಾಜ್ಯದ ಸಹಾಯಧನಕ್ಕೆ ಗುರುತು ಹಾಕಿದ ತಲಾ ಮೂರು ಪ್ರತಿಗಳನ್ನು ನೀಡುವುದು.

ಇ) ಸಂದರ್ಭೋಚಿತವಾಗಿ ಕೇಂದ್ರದ ಸಹಾಯಧನಕ್ಕೆ ಗುರುತು ಮಾಡಿದ ಮೂರು ಬಿಲ್ಲುಗಳನ್ನು ಕೇಂದ್ರದ ಅನುದಾನಕ್ಕೆ ಮತ್ತು ರಾಜ್ಯದ ಸಹಾಯಧನಕ್ಕೆ ಗುರುತು ಮಾಡಿದ ಮೂರು ಬಿಲ್ಲುಗಳನ್ನು ರಾಜ್ಯದ ಅನುದಾನಕ್ಕೆ ಡಿ.ಸಿ.ಬಿಲ್ಲನ್ನು (ಸಂದರ್ಭೋಚಿತವಾಗಿ) ತಯಾರಿಸಲು ಉಪಯೋಗಿಸಿಕೊಳ್ಳುವುದು.

ಈ) ಕೇಂದ್ರದ ಹಾಗೂ ರಾಜ್ಯದ ಸಹಾಯಧನವನ್ನು ನೀಡಲು ತಯಾರಿಸುವ ಡಿ.ಸಿ.ಬಿಲ್ಲುಗಳನ್ನು ಅನುಕ್ರಮವಾಗಿ ಮೂಲ ಸಂಖ್ಯೆಯ (A) ಮತ್ತು (B) ಎಂದು ಗುರುತು ಮಾಡುವುದು. ಉದಾಃ ಕೇಂದ್ರದ ಸಹಾಯಧನಕ್ಕೆ ತಯಾರಿಸಿದ ಡಿ.ಸಿ. ಬಿಲ್ಲು ಸಂ.120 (A) ಆದಲ್ಲಿ ಅದೇ ಉಪಕರಣದ ರಾಜ್ಯದ ಅನುದಾನಕ್ಕೆ ತಯಾರಿಸುವ ಡಿ.ಸಿ.ಬಿಲ್ಲಿಗೆ 120(B) ಎಂದು ನೀಡುವುದು.

ಉ) ಇಲಾಖೆಯು ಸಹಾಯಧನ ನಿಗದಿಪಡಿಸುವ ಸಮಯದಲ್ಲಿ ಕೇಂದ್ರ ಪುರಸ್ಕೃತ ಮಾರ್ಗಸೂಚಿಗಳನ್ವಯ, ಕೇಂದ್ರ ಪುರಸ್ಕೃತ ಯೋಜನೆಗಳಡಿ ಹೆಚ್ಚಿನ ಸಹಾಯಧನ ಭರಿಸಲು ಇತರೇ, ಸಣ್ಣ/ಅತಿ ಸಣ್ಣ/ಮಹಿಳೆ/ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಎಂಬುದಾಗಿ ರೈತರನ್ನು ವರ್ಗೀಕರಣ ಮಾಡಿ ಸಹಾಯಧನ ನಿಗದಿಪಡಿಸಲಾಗಿರುತ್ತದೆ. ಇದರಿಂದಾಗಿ ಹಲವಾರು ಪ್ರಕರಣಗಳಲ್ಲಿ, ಹಲವಾರು ಉಪ ಶೆಡ್ಯೂಲ್ ವಾರು, ಮಾದರಿವಾರುಗಳಲ್ಲಿ ಸಣ್ಣ/ಅತಿ ಸಣ್ಣ/ಮಹಿಳೆ/ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ವರ್ಗಗಳಲ್ಲಿ ರಾಜ್ಯ ಸರ್ಕಾರದ ಪಾಲು"0" (ಸೊನ್ನೆ) ಇರುತ್ತದೆ. ಸದರಿ ಪ್ರಕರಣಗಳಿಗೆ ಸಂಬಂಧಿಸಿದಂತೆ ರಾಜ್ಯವಲಯದಡಿ ಕ್ರಿಯಾ ಯೋಜನೆ/ಅನುದಾನ ಲಭ್ಯವಿದ್ದಲ್ಲಿ ಕೆ-ಕಿಸಾನ್ ತಂತ್ರಾಂಶದಲ್ಲಿ ಜೇಷ್ಠತೆಯ ಆಧಾರದ ಮೇಲೆ ಲಭ್ಯವಿರುವ ರೈತರನ್ನು Pending Stage (ತಡೆಹಿಡಿಯುವುದು) ನಲ್ಲಿಡದೇ ರಾಜ್ಯ ಸರ್ಕಾರದ ಪಾಲಿನಲ್ಲಿ ಸಾಂಕೇತಿಕವಾಗಿ ರೂ.1.00 ಅನ್ನು ನಮೂದಿಸಿ ಸಂಬಂಧಪಟ್ಟ ರೈತರಿಗೆ ಆಯ್ಕೆ ಪತ್ರವನ್ನು ನೀಡುವುದು.

3. ಹಿಂದಿನ ಆರ್ಥಿಕ ವರ್ಷದ ಅಂತ್ಯದಲ್ಲಿ ರಾಜ್ಯದ ಅಥವಾ ಕೇಂದ್ರ ಪಾಲಿನ ಸಹಾಯಧನದಲ್ಲಿ ಒಂದನ್ನು ಪಾವತಿಸಿ ಇನ್ನೊಂದು ಪಾವತಿಯಾಗದೆ ಇರುವ ಸಂದರ್ಭಗಳಲ್ಲಿ, ಅಂತಹ ವಿವರಗಳನ್ನು ಕೇಂದ್ರ ಕಛೇರಿಗೆ ವರದಿ ಸಲ್ಲಿಸಿ, ಪ್ರಸ್ತುತ ಆರ್ಥಿಕ ವರ್ಷದಲ್ಲಿ ಬಾಕಿ ಇರುವ ಬಿಲ್ಲುಗಳ ಸಹಾಯಧನ ಪಾವತಿಸಿ ನಂತರವೇ ಪ್ರಸ್ತುತ ಸಾಲಿನ ಅರ್ಜಿಗಳ ಸಹಾಯಧನವನ್ನು ಪಾವತಿಸಲು ಕ್ರಮಕೈಗೊಳ್ಳುವುದು.

## ಇ). 2025-26 ನೇ ಸಾಲಿನಲ್ಲಿ ಹೈಟೆಕ್ ಹಾರ್ವೆಸ್ಟರ್ ಹಬ್ ಯೋಜನೆಯಡಿ ಮಾರ್ಗಸೂಚಿಗಳು

ರಾಜ್ಯದಲ್ಲಿ ಚಾಲ್ತಿಯಲ್ಲಿರುವ ಕೃಷಿ ಯಂತ್ರಧಾರೆ ಕೇಂದ್ರಗಳನ್ನು ಇನ್ನಷ್ಟು ಬಲಪಡಿಸಲು, ಹೈಟೆಕ್ ಹಾರ್ವೆಸ್ಟರ್ ಹಬ್ ಯೋಜನೆಯನ್ನು ಅನುಷ್ಠಾನ ಮಾಡಲು ಉದ್ದೇಶಿಸಲಾಗಿರುತ್ತದೆ. ಮುಂದುವರೆದು, ಕೃಷಿ ಯಂತ್ರಧಾರೆ ಕೇಂದ್ರಗಳೊಂದಿಗೆ ಇತರೆ ಸಂಘ-ಸಂಸ್ಥೆಗಳು (FPO ಗಳನ್ನೊಳಗೊಂಡಂತೆ) ಹಾಗೂ ವೈಯಕ್ತಿಕ ಫಲಾನುಭವಿಗಳಿಗೂ ಸಹ ಹೈಟೆಕ್ ಹಾರ್ವೆಸ್ಟರ್ ಹಬ್ ಸ್ಥಾಪಿಸಲು ಅವಕಾಶ ನೀಡುವ ನಿಟ್ಟಿನಲ್ಲಿ ಪ್ರತಿ ಘಟಕಕ್ಕೆ ಗರಿಷ್ಠ ರೂ.100.00 ಲಕ್ಷಗಳಿಗೆ ಮೀರದಂತೆ ಕೃಷಿ ಪರಿಕರಗಳು ಮತ್ತು

ಗುಣಮಟ್ಟ ನಿಯಂತ್ರಣ ಯೋಜನೆ, ಲೆ.ಶೀ.2401-00-103-0-15 ರಡಿ ಉ.ಶೀ: 106, 422 ಮತ್ತು 423 ರಡಿ ಒದಗಿಸಿರುವ ಅನುದಾನದಲ್ಲಿ ಶೇ.40 ರಿಂದ ಶೇ.70 ರಷ್ಟು ಸಹಾಯಧನ ಒದಗಿಸಿ ಅನುಷ್ಠಾನ ಮಾಡಲು ಆದೇಶಿಸಲಾಗಿರುತ್ತದೆ.

ಮೇಲ್ಕಂಡ ಎಲ್ಲಾ ಅಂಶಗಳ ಹಿನ್ನಲೆಯಲ್ಲಿ, ಹೈಟೆಕ್ ಹಾರ್ವೆಸ್ಟರ್ ಹಬ್ ಯೋಜನೆಯನ್ನು ಈ ಕೆಳಕಂಡ ಮಾರ್ಗಸೂಚಿಯಂತೆ ಅನುಷ್ಠಾನ ಮಾಡುವುದು:

1. ಹೈಟೆಕ್ ಹಾರ್ವೆಸ್ಟರ್ ಹಬ್ ಯೋಜನೆಯನ್ನು ಕೃಷಿ ಪರಿಕರಗಳು ಮತ್ತು ಗುಣಮಟ್ಟ ನಿಯಂತ್ರಣ ಯೋಜನೆ, ಲೆಕ್ಕ ಶೀರ್ಷಿಕೆ: 2401-00-103-0-15 ರಡಿ ಉ.ಶೀ: 106, 422 ಮತ್ತು 423 ರಡಿ ಒದಗಿಸುವ ಅನುದಾನವನ್ನು ಬಳಸಿಕೊಳ್ಳುವುದು.
2. ಹೈಟೆಕ್ ಹಾರ್ವೆಸ್ಟರ್ ಹಬ್ ಗಳನ್ನು ಬೆಳೆಯ ವಿಧ ಮತ್ತು ಕಟಾವು ಅವಧಿಯ ಆಧಾರದ ಮೇಲೆ Corridor ಮಾದರಿಯಲ್ಲಿ ಸ್ಥಾಪಿಸುವುದು. Corridor ನಲ್ಲಿ ಸದರಿ ಯಂತ್ರೋಪಕರಣಗಳು ಸಂಚರಿಸಿ ಕಾರ್ಯನಿರ್ವಹಿಸಬಹುದಾಗಿದೆ ಹಾಗೂ ಸದರಿ ಹಬ್ ಗಳು ಯಾವುದೇ ತಾಲ್ಲೂಕು / ಹೋಬಳಿಗಳಿಗೆ ಸೀಮಿತವಾಗಿರುವುದಿಲ್ಲ. ಬೇಡಿಕೆಯನುಸಾರ ಸದರಿ ಯಂತ್ರೋಪಕರಣಗಳು Corridor ನಲ್ಲಿ ಸಂಚರಿಸಲು ಅವಕಾಶವಿರುತ್ತದೆ. ಹಬ್ ವಾರು ನಿಗದಿಪಡಿಸಿದ Corridor ಅನ್ನು "**ಅನುಬಂಧ-A**" ರಲ್ಲಿ ನೀಡಲಾಗಿದೆ. ಅನುಬಂಧ-A ರಲ್ಲಿ ನೀಡಿರುವ ಹಬ್‌ವಾರು Corridor ನಲ್ಲಿ ಒಂದು ಜಿಲ್ಲೆಯಿಂದ ಇನ್ನೊಂದು ಜಿಲ್ಲೆಗೆ ಸಂಚರಿಸುವ ಮುನ್ನ ಸಂಬಂಧಪಟ್ಟ ಜಿಲ್ಲಾ ಜಂಟಿ ಕೃಷಿ ನಿರ್ದೇಶಕರ ಅನುಮೋದನೆ ಪಡೆಯುವುದು.
3. ಹೈಟೆಕ್ ಹಾರ್ವೆಸ್ಟರ್ ಹಬ್ ಗಳನ್ನು ಅನುಷ್ಠಾನ ಮಾಡಲು ಚಾಲ್ತಿಯಲ್ಲಿರುವ ಕೃಷಿ ಯಂತ್ರಧಾರೆ ಕೇಂದ್ರಗಳು / ಸೇವಾದಾರ ಸಂಸ್ಥೆಗಳು / ವೈಯಕ್ತಿಕ ಫಲಾನುಭವಿಗಳು(Individual) ಹಾಗೂ ನೊಂದಾಯಿತ ಸಂಘ-ಸಂಸ್ಥೆಗಳು (FPO ಗಳನ್ನೊಳಗೊಂಡಂತೆ) ಭಾಗವಹಿಸಬಹುದಾಗಿರುತ್ತದೆ.
4. ಹೈಟೆಕ್ ಹಾರ್ವೆಸ್ಟರ್ ಹಬ್‌ಗಳ ಸೇವಾದಾರರನ್ನು ಆಯ್ಕೆ ಮಾಡುವಾಗ ಸ್ಥಳೀಯವಾಗಿ ಸಮರ್ಪಕವಾಗಿ ಕಾರ್ಯನಿರ್ವಹಿಸುತ್ತಿರುವ ಕೃಷಿ ಯಂತ್ರಧಾರೆ ಕೇಂದ್ರಗಳ / ಕೃಷಿ ಯಂತ್ರೋಪಕರಣಗಳ ಬ್ಯಾಂಕ್ (Farm Machinery Banks-FMB's) ಗಳ ಸಂಸ್ಥೆಗಳಿಗೆ ಆದ್ಯತೆ ನೀಡುವುದು.
5. ಸಾಮಾನ್ಯ ವರ್ಗದ ರೈತರಿಗೆ ಗರಿಷ್ಠ ಶೇ.50 ರಂತೆ, ಪ.ಜಾ./ಪ.ಪಂ. ವರ್ಗದ ರೈತರಿಗೆ ಗರಿಷ್ಠ ಶೇ.70 ರಂತೆ ಹಾಗೂ ಸಂಘ-ಸಂಸ್ಥೆಗಳಿಗೆ (ಚಾಲ್ತಿಯಲ್ಲಿರುವ ಕೃಷಿ ಯಂತ್ರಧಾರೆ ಕೇಂದ್ರಗಳ ಸೇವಾದಾರ ಸಂಸ್ಥೆ / FPO ಗಳನ್ನೊಳಗೊಂಡಂತೆ) ಗರಿಷ್ಠ ಶೇ.70 ರಂತೆ ಸಹಾಯಧನವನ್ನು ನೀಡುವುದು.
6. ವಿವಿಧ ರೀತಿಯ ಹಾರ್ವೆಸ್ಟರ್ ಹಬ್ ಗಳಿಗೆ "**ಅನುಬಂಧ-B**" ರಲ್ಲಿ ನಿಗದಿಪಡಿಸಿದ ಗರಿಷ್ಠ **ಸಹಾಯಧನದ ಮೊತ್ತಕ್ಕೆ ಸೀಮಿತಗೊಳಿಸಿ ಸ್ಥಳೀಯವಾಗಿ** ಅಗತ್ಯವಿರುವ ಕೃಷಿ ಯಂತ್ರೋಪಕರಣಗಳನ್ನು **ದಾಸ್ತಾನೀಕರಿಸಲು ಪ್ರತಿ ಒಂದು ಹೈಟೆಕ್** ಹಾರ್ವೆಸ್ಟರ್ ಹಬ್ **ಘಟಕಕ್ಕೆ ಗರಿಷ್ಠ ಮೊತ್ತ ರೂ.100.00 ಲಕ್ಷಗಳು ಮೀರದಂತೆ** (ರೂ.5.00 ಲಕ್ಷಗಳ ಆಡಳಿತಾತ್ಮಕ ವೆಚ್ಚ ಒಳಗೊಂಡಂತೆ) ಸಹಾಯಧನವನ್ನು ಒದಗಿಸುವುದು.
7. ಪ್ರತಿ ಹೈಟೆಕ್ ಹಾರ್ವೆಸ್ಟರ್ ಹಬ್ ಸ್ಥಾಪನೆಗೆ ರೂ.5.00 ಲಕ್ಷಗಳ ಆಡಳಿತಾತ್ಮಕ ವೆಚ್ಚವನ್ನಾಗಿ ಒಂದು ಬಾರಿ ಮಾತ್ರ ನೀಡುವುದು (ವೈಯಕ್ತಿಕ ಫಲಾನುಭವಿಗಳನ್ನು ಹೊರತುಪಡಿಸಿ).
8. ಕೃಷಿ ಯಂತ್ರಧಾರೆ ಕೇಂದ್ರಗಳನ್ನು ಒಳಗೊಂಡಂತೆ ಸಂಘ-ಸಂಸ್ಥೆಗಳು (FPO ಗಳನ್ನೊಳಗೊಂಡಂತೆ) / ಟ್ರಸ್ಟ್ ಗಳು ಮಾತ್ರ ಕಂಬೈಡ್ ಹಾರ್ವೆಸ್ಟರ್ ಮತ್ತು ಶುಗರ್ ಕೇನ್ ಹಾರ್ವೆಸ್ಟರ್ ಗಳನ್ನು ಒಳಗೊಂಡ **"Combo ಹಾರ್ವೆಸ್ಟರ್ ಹಬ್"** ಗೆ ಅರ್ಜಿಯನ್ನು ಸಲ್ಲಿಸಲು ಅವಕಾಶ ನೀಡುವುದು.

9. ಕೃಷಿ ಯಂತ್ರೋಪಕರಣಗಳ ನೈಜ ಬೆಲೆ ಆಧರಿಸಿ **"ಅನುಬಂಧ-C"** ರಲ್ಲಿ ಲಗತ್ತಿಸಿದಂತೆ ಫಲಾನುಭವಿ ವರ್ಗವಾರು/ಸಂಘ-ಸಂಸ್ಥೆವಾರು (FPO ಗಳನ್ನೊಳಗೊಂಡಂತೆ) ನಿಗದಿಪಡಿಸಿದ ಗರಿಷ್ಠ ಮೊತ್ತಕ್ಕೆ ಸೀಮಿತಗೊಳಿಸಿ ಕೃಷಿ ಯಂತ್ರೋಪಕರಣವಾರು ನಿಗದಿಪಡಿಸಿದ ಗರಿಷ್ಠ ಸಹಾಯಧನವನ್ನು ಒದಗಿಸಲಾಗುವುದು. ಸದರಿ ಸಹಾಯಧನವನ್ನು **"Credit Linked Back Ended Subsidy"** ಮುಖಾಂತರವೇ ನೀಡುವುದು. ತಾತ್ವಿಕ ಸಾಲ ಮಂಜೂರಾತಿ ಪತ್ರವನ್ನು Nationalized Bank/Scheduled Bank/DCC Bank/ಸಹಕಾರಿ ಬ್ಯಾಂಕ್ ಗಳಿಂದ ಪಡೆಯುವುದು ಕಡ್ಡಾಯವಾಗಿರುತ್ತದೆ.
10. ವಿವಿಧ ರೀತಿಯ ಹಾರ್ವೆಸ್ಟರ್ ಹಬ್ ಗಳಿಗೆ ನಿಗಧಿಪಡಿಸಿದ ಗರಿಷ್ಠ ಸಹಾಯಧನದ ಮೊತ್ತಕ್ಕೆ ಮಿತಿಗೊಳಿಸಿ ಸ್ಥಳೀಯವಾಗಿ ಬೆಳೆಗಳ ವಿಸ್ತೀರ್ಣದ ಆಧಾರದ ಮೇಲೆ ಅಗತ್ಯವಿರುವ **"ಅನುಬಂಧ-D"** ರಲ್ಲಿ ನೀಡಿದ ಯಂತ್ರೋಪಕರಣಗಳನ್ನು ದಾಸ್ತಾನೀಕರಿಸಬೇಕಾಗಿರುತ್ತದೆ.
11. ಪ್ರತಿ "Combo ಹಾರ್ವೆಸ್ಟರ್ ಹಬ್" ನಲ್ಲಿ ಒಂದು ಕಂಬೈನ್ಡ್ ಹಾರ್ವೆಸ್ಟರ್ ಹಾಗೂ ಒಂದು ಶುಗರ್‌ಕೇನ್ ಹಾರ್ವೆಸ್ಟರ್ ಗಳೊಂದಿಗೆ Baler ಮತ್ತು Inter row Rotovator ದಾಸ್ತಾನೀಕರಿಸುವುದು ಕಡ್ಡಾಯವಾಗಿರುತ್ತದೆ.
12. "ಕಂಬೈನ್ಡ್ ಹಾರ್ವೆಸ್ಟರ್ ಹಬ್" ನಲ್ಲಿ ಕಂಬೈನ್ಡ್ ಹಾರ್ವೆಸ್ಟರ್ ರೊಂದಿಗೆ Baler ದಾಸ್ತಾನೀಕರಿಸುವುದು ಕಡ್ಡಾಯವಾಗಿರುತ್ತದೆ.
13. "ಶುಗರ್‌ಕೇನ್ ಹಾರ್ವೆಸ್ಟರ್ ಹಬ್" ನಲ್ಲಿ ಶುಗರ್‌ಕೇನ್ ಹಾರ್ವೆಸ್ಟರ್ ರೊಂದಿಗೆ Inter row Rotovator ದಾಸ್ತಾನೀಕರಿಸುವುದು ಕಡ್ಡಾಯವಾಗಿರುತ್ತದೆ.
14. ಕ್ರ.ಸಂ.11, 12 & 13 ರಲ್ಲಿ ತಿಳಿಸಿರುವ ಯಂತ್ರೋಪಕರಣಗಳನ್ನು ಹೊರತುಪಡಿಸಿ, ಉಳಿದಂತೆ, "ಅನುಬಂಧ-C" ರಲ್ಲಿ ನೀಡಿದ ಯಂತ್ರೋಪಕರಣಗಳಲ್ಲಿ ಸ್ಥಳೀಯವಾಗಿ ಅಗತ್ಯವಿರುವ ಯಂತ್ರೋಪಕರಣಗಳನ್ನು ದಾಸ್ತಾನೀಕರಿಸಲು ಅವಕಾಶವಿರುತ್ತದೆ. "ಹಾರ್ವೆಸ್ಟರ್ ಹಬ್" ವಾರು ದಾಸ್ತಾನೀಕರಿಸುವ ಕಡ್ಡಾಯ ಮತ್ತು ಐಚ್ಛಿಕ ಯಂತ್ರೋಪಕರಣಗಳ ವಿವರಗಳನ್ನು **"ಅನುಬಂಧ-D"** ರಲ್ಲಿ ನೀಡಲಾಗಿರುತ್ತದೆ. ಹೈಟೆಕ್ ಹಾರ್ವೆಸ್ಟರ್ ಹಬ್‌ನ ಯಂತ್ರೋಪಕರಣಗಳನ್ನು ದಾಸ್ತಾನು ಮಾಡಬೇಕಾದ ಸಂದರ್ಭದಲ್ಲಿ, ಒಂದು ವೇಳೆ ದರಪಟ್ಟಿಯಲ್ಲಿ ಇರುವ ಯಂತ್ರೋಪಕರಣಗಳು ಲಭ್ಯವಿಲ್ಲದಿದ್ದ ಪಕ್ಷದಲ್ಲಿ ಕೆ.ಟಿ.ಪಿ.ಪಿ ಅಧಿನಿಯಮದ ಅನ್ವಯ ಅಥವಾ GEM (Government e-Marketplace) ಮೂಲಕ ಜಿಲ್ಲಾ ಮಟ್ಟದ ಉಪಕರಣ ಸಮಿತಿಯಲ್ಲಿ ಅನುಮೋದನೆ ಪಡೆದು ಖರೀದಿಸಬಹುದು.
15. ವಿವಿಧ ರೀತಿಯ ಹಾರ್ವೆಸ್ಟರ್ ಹಬ್‌ಗಳಿಗೆ ನಿಗದಿಪಡಿಸಿದ ಗರಿಷ್ಠ ಸಹಾಯಧನದ ಮೊತ್ತಕ್ಕೆ ಮೀರದಂತೆ ಸ್ಥಳೀಯವಾಗಿ ಬೇಡಿಕೆ ಇದ್ದಲ್ಲಿ ಒಂದೇ ಯಂತ್ರೋಪಕರಣವನ್ನು 2 ಅಥವಾ ಅವಶ್ಯಕತೆ ಇರುವಷ್ಟು ಸಂಖ್ಯೆಯಲ್ಲಿ ಜಿಲ್ಲಾಮಟ್ಟದ ಉಪಕರಣ ಸಮಿತಿಯಲ್ಲಿ ಅನುಮೋದನೆ ಪಡೆದು ದಾಸ್ತಾನು ಮಾಡಬಹುದಾಗಿರುತ್ತದೆ.
16. ಆಯ್ಕೆಯಾದ ಫಲಾನುಭವಿಗಳು / ಸಂಘ-ಸಂಸ್ಥೆಗಳು ಕೃಷಿ ಮೂಲಭೂತ ಸೌಕರ್ಯ ನಿಧಿ (AIF-Agricultural Infrastructure Fund) ಸಾಲದ ನೆರವನ್ನು ಪಡೆಯಲು ಸಹ ಅವಕಾಶವಿರುತ್ತದೆ.
17. ಹೈಟೆಕ್ ಹಾರ್ವೆಸ್ಟರ್ ಹಬ್‌ಗಳಲ್ಲಿ ದಾಸ್ತಾನೀಕರಿಸುವ ಯಂತ್ರೋಪಕರಣಗಳನ್ನು ಬಾಡಿಗೆ ಆಧಾರದ ಮೇಲೆ Corridor ನಲ್ಲಿ ಬರುವ ರೈತರಿಗೆ ಒದಗಿಸುವುದು.

18. ಪ್ರತಿ ಹೈಟೆಕ್ ಹಾರ್ವೆಸ್ಟರ್ ಹಬ್ ಘಟಕಗಳಲ್ಲಿ ಈ ಕೆಳಕಂಡ ಹೈಟೆಕ್ ಯಂತ್ರೋಪಕರಣಗಳನ್ನು ದಾಸ್ತಾನೀಕರಿಸಿ ರೈತರಿಗೆ ಬಾಡಿಗೆ ಆಧಾರದಲ್ಲಿ ಒದಗಿಸಲು ಅವಕಾಶವಿರುತ್ತದೆ:

| ಕ್ರ.ಸಂ | ಹೈಟೆಕ್ ಯಂತ್ರೋಪಕರಣಗಳ ವಿವರಗಳು / ಹೆಸರು |
|---|---|
| 1 | Combined Harvester (Track/Wheel/TOT/Tractor operated) |
| 2 | Sugarcane Harvester |
| 3 | Self-propelled Reapers |
| 4 | Tractor operated Hay Rake |
| 5 | Tractor operated Balers |
| 6 | Hi-tech High volume Multi Crop Thresher > 4 tonne/hr & suitable for minimum 6 crops |
| 7 | Silage making Machine |
| 8 | Stubble Shaver with fertiliser box |
| 9 | Single row Mobile Shredder |
| 10 | Rice Straw chopper |
| 11 | Roto Slasher |
| 12 | Tractor operated Mulcher |
| 13 | Interrow Rotavator |

19. ಕಾರ್ಯಾದೇಶ ನೀಡಿದ 30-45 ದಿನಗಳೊಳಗಾಗಿ ಆಯ್ಕೆಗೊಂಡ ಸಂಸ್ಥೆಗಳು/ಫಲಾನುಭವಿಗಳು ಹೈಟೆಕ್ ಹಾರ್ವೆಸ್ಟರ್ ಹಬ್ ಗಳನ್ನು ಸ್ಥಾಪಿಸುವುದು.
20. ಹೈಟೆಕ್ ಹಾರ್ವೆಸ್ಟರ್ ಹಬ್ ಗಳಿಗೆ ಸಹಾಯಧನದಡಿ ಒದಗಿಸುವ ಹೈಟೆಕ್ ಯಂತ್ರೋಪಕರಣಗಳ ಕಾರ್ಯಾಚರಣೆ / ಸಂಚರಣೆಯನ್ನು ಗಮನಿಸಲು (To track the live Movement & Location of Machines) ಹಾಗೂ ಯಂತ್ರೋಪಕರಣವಾರು / ಹಬ್‌ವಾರು ವರದಿಯನ್ನು ಪಡೆಯಲು ಅನುಕೂಲವಾಗುವಂತೆ ರೂ.1.00 ಲಕ್ಷಕ್ಕಿಂತ ಹೆಚ್ಚಿನ ಮೌಲ್ಯದ ಸ್ವಯಂಚಾಲಿತ ಕೃಷಿ ಯಂತ್ರೋಪಕರಣಗಳಿಗೆ AI-Powered Telematics Kit ಅನ್ನು ಅಳವಡಿಸಿಕೊಳ್ಳುವುದು ಕಡ್ಡಾಯವಾಗಿರುತ್ತದೆ.
21. ಹೈಟೆಕ್ ಹಾರ್ವೆಸ್ಟರ್ ಹಬ್ ಗಳ ಅನುಷ್ಠಾನವನ್ನು ಕುರಿತು ವ್ಯಾಪಕ ಪ್ರಚಾರ ನೀಡಲು ಕ್ರಮ ಕೈಗೊಳ್ಳುವುದು.
22. ಕಾರ್ಯಾದೇಶ ನೀಡಿದ ನಂತರ ಖರೀದಿಸಿದ ಯಂತ್ರೋಪಕರಣಗಳಿಗೆ ಮಾತ್ರ ಸಹಾಯಧನವನ್ನು ನೀಡುವುದು. ಆಯ್ಕೆಯಾಗುವ ರೈತರು ಅಥವಾ ಸಂಘ/ಸಂಸ್ಥೆಗಳು ಈಗಾಗಲೇ ಖರೀದಿಸಿರುವ ಹೈಟೆಕ್ ಯಂತ್ರೋಪಕರಣಗಳಿಗೆ ಸದರಿ ಯೋಜನೆಯಡಿ ಸಹಾಯಧನ ನೀಡಲು ಅವಕಾಶವಿರುವುದಿಲ್ಲ.

**ಸೇವಾದಾರ ಸಂಸ್ಥೆಗಳಿಗೆ/ಇತರೆ ಸಂಘ-ಸಂಸ್ಥೆಗಳ (FPO ಗಳನ್ನೊಳಗೊಂಡಂತೆ)/ ವೈಯಕ್ತಿಕ ಫಲಾನುಭವಿಗಳ ಆಯ್ಕೆಗೆ ಅನುಸರಿಸಬೇಕಾದ ಮಾನದಂಡಗಳು:**

1. ಹಾರ್ವೆಸ್ಟರ್ ಹಬ್ ಯೋಜನೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಯೋಜನೆಯ ಬಗ್ಗೆ ಪತ್ರಿಕಾ ಪ್ರಕಟಣೆ/ಸಮೂಹ ಮಾಧ್ಯಮಗಳ ಮೂಲಕ ವ್ಯಾಪಕ ಪ್ರಚಾರವನ್ನು ನೀಡಿ, ಜಿಲ್ಲೆಗಳಿಗೆ ನೀಡಿದ ಭೌತಿಕ ಗುರಿಗಳಿಗೆ ಅನುಗುಣವಾಗಿ ಜಿಲ್ಲಾ ಜಂಟಿ ಕೃಷಿ ನಿರ್ದೇಶಕರು, ಜಿಲ್ಲಾ ಪಂಚಾಯತ್ ಮುಖ್ಯ ನಿರ್ವಾಹಕ ಅಧಿಕಾರಿಗಳೊಂದಿಗೆ ಚರ್ಚಿಸಿ, ಜಿಲ್ಲಾ ಮಟ್ಟದಲ್ಲಿ 15 ದಿನಗಳ ಸಮಯವನ್ನು ನೀಡಿ EoI (Expression of Interest) / RfP / ಇತರೆ ಸೂಕ್ತವಾದ ನೋಂದಣಿ ಪ್ರಕ್ರಿಯೆ ಮುಖಾಂತರ

ಅರ್ಜಿ ಅಹ್ವಾನಿಸಿ ನಿಯಮಾನುಸಾರ ಹೈಟೆಕ್ ಹಾರ್ವೆಸ್ಟರ್ ಹಬ್ ಗಳನ್ನು ನಿರ್ವಹಿಸಲು ಸೇವಾದಾರ ಸಂಸ್ಥೆಗಳನ್ನು / ಫಲಾನುಭವಿಗಳನ್ನು ಆಯ್ಕೆ ಮಾಡುವುದು.

2. ಜಿಲ್ಲೆಯಲ್ಲಿ ಹಂಚಿಕೆ ಮಾಡಲಾದ ಹಾಗೂ ನಿಗದಿಪಡಿಸಿದ ಹಬ್ ಗಳಲ್ಲಿ ಅರ್ಜಿದಾರರು ಇಚ್ಚಿಸುವ ಹಬ್ ಗಳಿಗೆ ಅರ್ಜಿಯನ್ನು ನಿಗದಿತ ನಮೂನೆಯಲ್ಲಿ, ಸಂಬಂಧಿಸಿದ ದಾಖಲಾತಿ (ಸಂಸ್ಥೆ ನೋಂದಾಯಿಸಿದ ಪ್ರಮಾಣ ಪತ್ರ, ಪಹಣಿ, ಜಾತಿ ಪ್ರಮಾಣ ಪತ್ರ, ಗುರುತಿನ ಪತ್ರ, ಬ್ಯಾಂಕ್ ಖಾತೆ ಸಂಖ್ಯೆ, ನಿಗದಿತ ಮೊತ್ತದ ಚಾಪಾ ಕಾಗದದ ಮೇಲೆ ಹಬ್ ಅನ್ನು ವರಬಾರ ಮಾಡುವುದಿಲ್ಲ ವೆಂದು ಮುಚ್ಚಳಿಕೆ ಪತ್ರ, ಇತ್ಯಾದಿ) ಗಳನ್ನು ಆಯಾ ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕರ ಕಛೇರಿಯಲ್ಲಿ ಸಲ್ಲಿಸುವುದು.

3. ಸಹಕಾರ ಸಂಘಗಳ ನಿಬಂಧನೆಯಂತೆ / ಕಂಪನಿ ಕಾಯ್ದೆ ಯಡಿ ನೊಂದಾಯಿಸಿದ ಸಂಘ-ಸಂಸ್ಥೆಗಳು ಹಾಗೂ ವೈಯುಕ್ತಿಕ ರೈತರು ಮಾತ್ರ ಅರ್ಜಿ ಸಲ್ಲಿಸಲು ಅರ್ಹತೆಯನ್ನು ಹೊಂದಿರುತ್ತವೆ.

4. ಕೃಷಿ ಯಂತ್ರಧಾರೆ ಕೇಂದ್ರಗಳ ಸೇವಾದಾರ ಸಂಸ್ಥೆಗಳ/ ಕೃಷಿ ಯಂತ್ರೋಪಕರಣಗಳ ಬ್ಯಾಂಕ್ (FMBs) / ರೈತ ಉತ್ಪಾದಕ ಸಂಸ್ಥೆಗಳು (FPO)/ ಇತರೆ ಸಂಘ-ಸಂಸ್ಥೆಗಳು ಹಾಗೂ ವೈಯಕ್ತಿಕ ರೈತರು ರಾಜ್ಯಾದ್ಯಂತ ಅರ್ಜಿಗಳನ್ನು ಸಲ್ಲಿಸಲು ಅವಕಾಶವಿರುತ್ತದೆ.

5. ಆರು ಅಥವಾ ಒಂಬತ್ತು ವರ್ಷಗಳ ಕಾಲ ಸಮರ್ಪಕವಾಗಿ ಕಾರ್ಯನಿರ್ವಹಿಸುತ್ತಿರುವ ಮತ್ತು ತಪಾಸಣೆಯಲ್ಲಿ ಸಂಪೂರ್ಣವಾಗಿ ಲೆಕ್ಕ-ಪತ್ರ ಹಾಗೂ ಯಂತ್ರೋಪಕರಣಗಳನ್ನು ಹಾಜರುಪಡಿಸಿರುವ ಕೃಷಿ ಯಂತ್ರಧಾರೆ ಕೇಂದ್ರಗಳ ಸೇವಾದಾರ ಸಂಸ್ಥೆಗಳು ಮಾತ್ರ ಅರ್ಜಿ ಸಲ್ಲಿಸಬಹುದಾಗಿರುತ್ತದೆ.

6. ಇತ್ತೀಚಿನ ಎರಡು ವರ್ಷಗಳ (2023-24, 2024-25) ಲೆಕ್ಕ ಪರಿಶೋಧಕರ ವರದಿ ಹೊಂದಿರುವ ಸಮರ್ಪಕವಾಗಿ ಕಾರ್ಯನಿರ್ವಹಿಸುತ್ತಿರುವ ಕೃಷಿ ಯಂತ್ರೋಪಕರಣಗಳ ಬ್ಯಾಂಕ್ ಗಳನ್ನು ನಿರ್ವಹಿಸುತ್ತಿರುವ ಸಂಸ್ಥೆ / ಟ್ರಸ್ಟ್ ಗಳು ಅರ್ಜಿ ಸಲ್ಲಿಸಬಹುದಾಗಿರುತ್ತದೆ.

7. ಹೊಸ ಸಂಸ್ಥೆಗಳಾದಲ್ಲಿ ಕೃಷಿ ಯಂತ್ರೋಪಕರಣಗಳ ಬಳಕೆಯಲ್ಲಿ ಕನಿಷ್ಠ ಇತ್ತೀಚಿನ ಎರಡು ವರ್ಷಗಳ (2023-24, 2024-25) ಅನುಭವವನ್ನು ಹೊಂದಿರುವ ಸಂಸ್ಥೆಗಳು ಅರ್ಜಿ ಸಲ್ಲಿಸಬಹುದಾಗಿರುತ್ತದೆ. ಅಂತಹ ಸಂಸ್ಥೆಗಳು ಸಹ ಇತ್ತೀಚಿನ ಎರಡು ವರ್ಷಗಳ (2023-24, 2024-25) ಲೆಕ್ಕ ಪರಿಶೋಧಕರ ವರದಿಯನ್ನು ಹೊಂದಿರಬೇಕು.

8. ಪ್ರತಿಯೊಬ್ಬ FID ಹೊಂದಿರುವ ರೈತರು ರಾಜ್ಯಾದ್ಯಂತ ಒಂದು ಕಂಬೈನ್ಡ್ ಹಾರ್ವೆಸ್ಟರ್ ಅಥವಾ ಶುಗರ್ ಕೇನ್ ಹಾರ್ವೆಸ್ಟರ್ ಹಬ್ ಗೆ ಮಾತ್ರ ಅರ್ಜಿ ಸಲ್ಲಿಸಲು ಅವಕಾಶವಿರುತ್ತದೆ.

9. ಪ.ಜಾ/ಪ.ಪಂ ವರ್ಗದ ರೈತರು FID ಯೊಂದಿಗೆ ಸಂಬಂಧಿಸಿದ ಜಾತಿ ಪ್ರಮಾಣ ಪತ್ರವನ್ನು ಸಲ್ಲಿಸಬೇಕು.

10. ಸಹಾಯಧನವು Credit linked Back ended Subsidy ಆಗಿರುವುದರಿಂದ ಸಂಬಂಧಿಸಿರುವ ಬ್ಯಾಂಕ್ ನಿಂದ **"ತಾತ್ವಿಕ ಸಾಲ ಮಂಜುರಾತಿ ಪತ್ರ (In Principle Loan Sanction Letter)"** ವನ್ನು ಸಲ್ಲಿಸುವುದು. ತಾತ್ವಿಕ ಸಾಲ ಮಂಜೂರಾತಿ ಪತ್ರವನ್ನು Nationalized Bank/Scheduled Bank/ DCC Bank/ಸಹಕಾರಿ ಬ್ಯಾಂಕ್ ಗಳಿಂದ ಪಡೆಯುವುದು ಕಡ್ಡಾಯವಾಗಿರುತ್ತದೆ

11. ಶುಗರ್‌ಕೇನ್ ಹಾರ್ವೆಸ್ಟರ್ ಹಬ್ ಗೆ ಅರ್ಜಿ ಸಲ್ಲಿಸಲು ಇಚ್ಛಿಸುವ ಅರ್ಜಿದಾರರು ಮೇಲ್ಕಂಡ ಎಲ್ಲಾ ದಾಖಲಾತಿಗಳೊಂದಿಗೆ, ವ್ಯಾಪ್ತಿಯಲ್ಲಿ ಬರುವ ರೈತರೊಂದಿಗೆ ಸಕ್ಕರೆ ಕಾರ್ಖಾನೆಗಳಿಂದ ಕಬ್ಬು ಕಟಾವಿಗೆ ಮಾಡಿಕೊಂಡ ಲಿಖಿತ "ಒಪ್ಪಂದ ಪ್ರಮಾಣ ಪತ್ರ" ವನ್ನು ಅರ್ಜಿಯೊಂದಿಗೆ ಸಲ್ಲಿಸುವುದು.

12. ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕರ ಕಛೇರಿಯಲ್ಲಿ ಸ್ವೀಕೃತವಾಗುವ ಎಲ್ಲಾ ಅರ್ಜಿಗಳನ್ನು ಮೇಲ್ಕಂಡ ಎಲ್ಲಾ ಅಂಶಗಳನ್ವಯ ಪರಿಶೀಲಿಸಿ, ಸಂಬಂಧಿಸಿದ ಉಪ ಕೃಷಿ ನಿರ್ದೇಶಕರ ಮುಖಾಂತರ ಜಿಲ್ಲಾ ಜಂಟಿ ಕೃಷಿ ನಿರ್ದೇಶಕರಿಗೆ ಸಲ್ಲಿಸಬೇಕು.

13. ಜಿಲ್ಲಾ ಜಂಟಿ ಕೃಷಿ ನಿರ್ದೇಶಕರ ಕಛೇರಿಯಲ್ಲಿ ಸ್ವೀಕೃತಗೊಂಡ ಅರ್ಜಿಗಳನ್ನು ಮತ್ತೊಮ್ಮೆ ಪರಿಶೀಲಿಸಿ ಕ್ರೋಢೀಕರಿಸಿದ ಪಟ್ಟಿಯೊಂದಿಗೆ ಜಿಲ್ಲಾ ಮಟ್ಟದ ಉಪಕರಣ ಸಮಿತಿಯ ಸಭೆಯಲ್ಲಿ ಮಂಡಿಸುವುದು.

**ಜಿಲ್ಲಾ ಮಟ್ಟದ ಉಪಕರಣ ಸಮಿತಿ:-**

| | | |
|---|---|---|
| 1 | ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್ | ಅಧ್ಯಕ್ಷರು |
| 2 | ಜಂಟಿ ಕೃಷಿ ನಿರ್ದೇಶಕರು | ಉಪಾಧ್ಯಕ್ಷರು |
| 3 | ಸಂಬಂಧಿಸಿದ ತಾಲ್ಲೂಕಿನ ಸಹಾಯಕ ಕೃಷಿ ನಿರ್ದೇಶಕರು | ಸದಸ್ಯರು |
| 4 | ಜಿಲ್ಲಾ ಕೃಷಿಕ ಸಮಾಜದ ಅಧ್ಯಕ್ಷರು | ಸದಸ್ಯರು |
| 5 | ಕೃಷಿ ವಿಶ್ವವಿದ್ಯಾಲಯದ ಪ್ರತಿನಿಧಿ | ಸದಸ್ಯರು |
| 6 | ಜಿಲ್ಲೆಯ ಲೀಡ್ ಬ್ಯಾಂಕ್ ಮ್ಯಾನೇಜರ್ | ಸದಸ್ಯರು |
| 7 | ಜಿಲ್ಲೆಯ NABARD ಪ್ರತಿನಿಧಿ | ಸದಸ್ಯರು |
| 8 | ಇಬ್ಬರು ಪ್ರಗತಿಪರ/ಕೃಷಿ ಪ್ರಶಸ್ತಿ ವಿಜೇತ ರೈತರು | ಸದಸ್ಯರು |
| 9 | ಸಂಬಂಧಿಸಿದ ಉಪ ವಿಭಾಗದ ಉಪ ಕೃಷಿ ನಿರ್ದೇಶಕರು (DDA-1 & DDA-2) | ಸದಸ್ಯ ಕಾರ್ಯದರ್ಶಿ |

14. ಜಿಲ್ಲಾ ಮಟ್ಟದ ಉಪಕರಣ ಸಮಿತಿಯು,
- ಹಬ್‌ವಾರು ನಿಬಂಧನೆಗಳಿಗೆ ಅನುಸಾರವಾಗಿ ಅರ್ಜಿಗಳೊಂದಿಗೆ ಸಲ್ಲಿಸಿರುವ ದಾಖಲಾತಿಗಳನ್ನು ಪರಿಶೀಲಿಸಿ ಅಂತಿಮಗೊಳಿಸುವುದು.
- ಒಂದೇ ಹಬ್ ಗೆ ಒಂದಕ್ಕಿಂತ ಹೆಚ್ಚಿನ ಅರ್ಜಿಗಳು ಸಲ್ಲಿಕೆಯಾಗಿ ಅರ್ಹಗೊಂಡಲ್ಲಿ, ಲಾಟರಿ ಮುಖಾಂತರ ಆಯ್ಕೆ ಮಾಡುವುದು.
- ನಿಗಧಿಪಡಿಸಿದ ಸ್ಥಳಗಳಿಗೆ ಸಂಸ್ಥೆ / ವೈಯಕ್ತಿಕ ಫಲಾನುಭವಿಗಳು ಹಬ್ ವಾರು ಸ್ಥಳೀಯವಾಗಿ ಅಗತ್ಯವಿರುವ ಆಯ್ಕೆ ಮಾಡಿದ ಯಂತ್ರೋಪಕರಣಗಳನ್ನು ಅನುಮೋದನೆ ನೀಡುವುದು.
- ಸ್ಥಾಪನೆಯಾಗಿರುವ ಹಬ್ ಗಳ ನಿರ್ವಹಣೆಯಲ್ಲಿ ಸಮಸ್ಯೆ ಅಥವಾ ದೂರುಗಳು ಬಂದಲ್ಲಿ ಅಂತಹ ದೂರು ಮತ್ತು ಸಮಸ್ಯೆಗಳಿಗೆ ಸೂಕ್ತ ಪರಿಹಾರೋಪಾಯಗಳನ್ನು ಅಳವಡಿಸಲು ನಿರ್ದೇಶಿಸುವುದು.

15. ಆಯ್ಕೆಯಾದ ಸಂಸ್ಥೆ/ವೈಯಕ್ತಿಕ ಫಲಾನುಭವಿಗಳಿಗೆ ಸಂಬಂಧಿಸಿದ ಜಿಲ್ಲಾ ಜಂಟಿ ಕೃಷಿ ನಿರ್ದೇಶಕರು ಕಾರ್ಯಾದೇಶವನ್ನು ನಿಯಮಾನುಸಾರ ನೀಡಲಾಗುವುದು.

16. ಕಾರ್ಯಾದೇಶ ಪಡೆದ ಸಂಸ್ಥೆ/ವೈಯುಕ್ತಿಕ ಫಲಾನುಭವಿ ಹಬ್ ವಾರು ಅನುಮೋದನೆಗೊಂಡ ಯಂತ್ರೋಪಕರಣಗಳನ್ನು ದಾಸ್ತಾನೀಕರಿಸಲು ಕ್ರಮವಹಿಸುವುದು.

17. ಸಂಸ್ಥೆ/ವೈಯುಕ್ತಿಕ ಫಲಾನುಭವಿಯು ಆಯ್ಕೆಯಾದ ಫಲಾನುಭವಿಗಳು/ಸಂಘ-ಸಂಸ್ಥೆಗಳು ಕೃಷಿ ಮೂಲಭೂತ ಸೌಕರ್ಯ ನಿಧಿ (AIF-Agricultural Infrastructure Fund) ಸಾಲದ ನೆರವನ್ನು ಪಡೆಯಲು ಸಹ ಅವಕಾಶವಿರುತ್ತದೆ.
18. ಹಬ್ ವಾರು ಸ್ವೀಕೃತವಾದ ಯಂತ್ರೋಪಕರಣಗಳನ್ನು ಸಂಬಂದಿಸಿದ ರೈತ ಸಂಪರ್ಕ ಕೇಂದ್ರ ಮತ್ತು ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕರು ಪರಿಶೀಲಿಸಿ ಸಹಾಯಧನವನ್ನು ನಿಯಮಾನುಸಾರ ಸಂಬಂಧಿಸಿದವರ ಸಾಲದ ಬ್ಯಾಂಕ್ ಖಾತೆಗೆ Credit linked Back ended ಜಮೆ ಮಾಡುವುದು.

## ಅನುಬಂಧ-1

## ಆಯ್ಕೆ ಪತ್ರ (Selection Letter)(FM)

__________ನೇ ಸಾಲಿನಲ್ಲಿ ______________ಯೋಜನೆಯಡಿ ಶ್ರೀ/ಶ್ರೀಮತಿ __________________________ಬಿನ್/ಕೋಂ______________, __________ಗ್ರಾಮ, ______________ ಹೋಬಳಿ______________ ತಾಲ್ಲೂಕು, __________ಜಿಲ್ಲೆ (ನೋಂದಣಿ ಸಂಖ್ಯೆ: ______________, ಮೊಬೈಲ್ ಸಂಖ್ಯೆ:______________) ಆದ ನೀವು ಮ: __________________________________ಸಂಸ್ಥೆಯ ವತಿಯಿಂದ______________________ ಕೃಷಿ ಯಂತ್ರೋಪಕರಣ/ ಕೃಷಿ ಸಂಸ್ಕರಣಾ ಘಟಕವನ್ನು (Model:__________) ಕೃಷಿ ಇಲಾಖೆಯ ಮಾರ್ಗಸೂಚಿ ಅನ್ವಯ ಪಡೆಯಲು ಅರ್ಜಿ ಸಲ್ಲಿಸಿ ಸಹಾಯಧನ ಪಡೆಯಲು ಇಚ್ಛಿಸಿರುತ್ತೀರಿ.

ಸದರಿ ಕೃಷಿ ಯಂತ್ರೋಪಕರಣ/ ಸಂಸ್ಕರಣಾ ಘಟಕ ಸಂಬಂಧಿಸಿದಂತೆ, ರೂ.__________/- ರೈತರ ವಂತಿಕೆಯನ್ನು ___ ದಿನಗಳೊಳಗಾಗಿ ಮ: __________________________________ ಸಂಸ್ಥೆಯ______________ಬ್ಯಾಂಕ್, ಖಾತೆ ಸಂಖ್ಯೆ:______________,IFSC Code__________ ಗೆ ಪಾವತಿಸಲು ತಿಳಿಸಿದೆ. ಪಾವತಿಸಿರುವ ಬಗ್ಗೆ ವಿವರಗಳನ್ನು (ಬ್ಯಾಂಕ್ ಚಲನ್ ಸಂಖ್ಯೆ/ ಆರ್.ಟಿ.ಜಿ.ಎಸ್ ಸಂಖ್ಯೆ) ಸಹಾಯಕ ಕೃಷಿ ನಿರ್ದೇಶಕರ ಕಚೇರಿ, ______________ತಾಲ್ಲೂಕು ಇವರಿಗೆ ಸಲ್ಲಿಸಲು ಈ ಮೂಲಕ ತಿಳಿಸಿದೆ.

ಸಹಾಯಕ ಕೃಷಿ
ನಿರ್ದೇಶಕರು
__________ತಾಲ್ಲೂಕು

ಪ್ರತಿಯನ್ನು,
ಮ: __________________________________ಸಂಸ್ಥೆಗೆ ಮಾಹಿತಿಗಾಗಿ ಕಳುಹಿಸಿದೆ

ಅನುಬಂಧ-2

## ಸಂಸ್ಥೆಯ ಬದಲಾವಣೆಗೆ ರೈತರಿಂದ ದೃಢೀಕರಣ ಪತ್ರ
## Authorisation Letter from the Farmer for change of the Company

__________ನೇ ಸಾಲಿನಲ್ಲಿ ________________ಯೋಜನೆಯಡಿ ಶ್ರೀ/ಶ್ರೀಮತಿ ____________________________ಬಿನ್/ಕೋಂ______________, ___________ಗ್ರಾಮ, ________________ ಹೋಬಳಿ_____________ ತಾಲ್ಲೂಕು, ____________ಜಿಲ್ಲೆ (ನೋಂದಣಿ ಸಂಖ್ಯೆ: ______________, ಮೊಬೈಲ್ ಸಂಖ್ಯೆ:______________) ಆದ ನಾನು ಮೆ: ______________________________ಸಂಸ್ಥೆಯ ಕಡೆಯಿಂದ ______________________ ಕೃಷಿ ಯಂತ್ರೋಪಕರಣ / ಸಂಸ್ಕರಣಾ ಘಟಕವನ್ನು ಕೃಷಿ ಇಲಾಖೆಯ ಮಾರ್ಗಸೂಚಿ ಅನ್ವಯ ಪಡೆಯಲು ಅರ್ಜಿ ಸಲ್ಲಿಸಿರುತ್ತೇನೆ.

ಆದರೆ, ಕಾರಣಾಂತರಗಳಿಂದ ನಾನು ನನ್ನ ಸ್ವ-ಇಚ್ಛೆಯಿಂದ ಸದರಿ ಸಂಸ್ಥೆಯ ಬದಲಾಗಿ ಮೆ:______________________________________ಸಂಸ್ಥೆಯಿಂದ ಪಡೆಯಲು ಇಚ್ಛಿಸಿರುತ್ತೇನೆ. ಸದರಿ ಬದಲಾವಣೆಯನ್ನು ಆನ್‌ಲೈನ್ ಪೋರ್ಟಲ್ ನಲ್ಲಿ ಬದಲಾವಣೆ ಮಾಡಿಕೊಡಬೇಕೆಂದು ಮನವಿ ಸಲ್ಲಿಸುತ್ತಿದ್ದೇನೆ.

**(ರೈತರ ಹೆಸರು ಮತ್ತು ಸಹಿ)**

ಅನುಬಂಧ-3

## ಪರಿಶಿಷ್ಟ ಜಾತಿ/ ಪಂಗಡದ ರೈತರಿಂದ ಸಾಮಾನ್ಯ ವರ್ಗದಡಿ ಸಹಾಯಧನ ಪಡೆಯಲು ದೃಢೀಕರಣ ಪತ್ರ

## Authorisation Letter from the SC/ST Farmers for availing subsidy under General Category

__________ನೇ ಸಾಲಿನಲ್ಲಿ _______________ಯೋಜನೆಯಡಿ ಶ್ರೀ / ಶ್ರೀಮತಿ __________________________ಬಿನ್ / ಕೋಂ____________, __________ಗ್ರಾಮ, _______________ ಹೋಬಳಿ____________ ತಾಲ್ಲೂಕು, __________ಜಿಲ್ಲೆ (ನೋಂದಣಿ ಸಂಖ್ಯೆ: ____________, ಮೊಬೈಲ್ ಸಂಖ್ಯೆ:____________) ಆದ ನಾನು ಮೆ: ___________ ಸಂಸ್ಥೆಯ ವತಿಯಿಂದ ________________________ ಕೃಷಿ ಯಂತ್ರೋಪಕರಣ / ಸಂಸ್ಕರಣಾ ಘಟಕವನ್ನು ಕೃಷಿ ಇಲಾಖೆಯ ಮಾರ್ಗಸೂಚಿ ಅನ್ವಯ ಪಡೆಯಲು ಅರ್ಜಿ ಸಲ್ಲಿಸಿರುತ್ತೇನೆ.

ಆದರೆ, ವಿಶೇಷ ಘಟಕ ಯೋಜನೆ/ ಗಿರಿಜನ ಉಪಯೋಜನೆಯಡಿ ಅನುದಾನ ಲಭ್ಯವಿಲ್ಲದ ಪ್ರಯುಕ್ತ ನಾನು ನನ್ನ ಸ್ವ-ಇಚ್ಛೆಯಿಂದ ಸಾಮಾನ್ಯ ವರ್ಗದಡಿ ನಿಯಮಾನುಸಾರ ಸಹಾಯಧನ ಪಡೆಯಲು ಒಪ್ಪಿಗೆ ನೀಡಿ, ನನಗೆ ಸಾಮಾನ್ಯ ವರ್ಗದಡಿ ಸಹಾಯಧನ ನೀಡುವಂತೆ ಕೋರುತ್ತೇನೆ ಹಾಗೂ ಸಾಮಾನ್ಯ ವರ್ಗದಡಿ ವಿಶೇಷ ಘಟಕ ಯೋಜನೆ/ ಗಿರಿಜನ ಉಪಯೋಜನೆಗಿಂತ ಕಡಿಮೆ ಸಹಾಯಧನ ಪಡೆಯಲು ನನಗೆ ಯಾವುದೇ ರೀತಿಯ ಅಭ್ಯಂತರ ಇರುವುದಿಲ್ಲವೆಂದು ದೃಢೀಕರಿಸುತ್ತೇನೆ.

**(ರೈತರ ಹೆಸರು ಮತ್ತು ಸಹಿ)**

ಅನುಬಂಧ-4

## ಕಾರ್ಯಾದೇಶ (Work Order) (FM)

__________ನೇ ಸಾಲಿನಲ್ಲಿ ________________ಯೋಜನೆಯಡಿ ಶ್ರೀ / ಶ್ರೀಮತಿ ____________________ಬಿನ್/ಕೋಂ______________, ________________ ಗ್ರಾಮ, ________________ ಹೋಬಳಿ________________ ತಾಲ್ಲೂಕು____________ ಜಿಲ್ಲೆ(ನೋಂದಣಿ ಸಂಖ್ಯೆ: ______________, ಮೊಬೈಲ್ ಸಂಖ್ಯೆ:________________) ಆದ ಇವರು ಮೆ: ______________________________ ಸಂಸ್ಥೆಯ ವತಿಯಿಂದ ______________ ಕೃಷಿ ಯಂತ್ರೋಪಕರಣ / ಸಂಸ್ಕರಣಾ ಘಟಕವನ್ನು (Model: ) ಕೃಷಿ ಇಲಾಖೆಯ ಮಾರ್ಗಸೂಚಿ ಅನ್ವಯ ಪಡೆಯಲು ರೈತರ ವಂತಿಕೆ ರೂ.__________ಗಳನ್ನು ಪಾವತಿಸಿದ್ದು, ಇವರಿಗೆ ಸದರಿ ಕೃಷಿ ಯಂತ್ರೋಪಕರಣ / ಸಂಸ್ಕರಣಾ ಘಟಕವನ್ನು (Model:________) ಸರಬರಾಜು ಮಾಡಲು ಕಾರ್ಯಾದೇಶ ನೀಡಲಾಗಿರುತ್ತದೆ.

ಈ ಕಾರ್ಯಾದೇಶ ಪಡೆದ ನಂತರ ನಿಗದಿತ ಅವಧಿಯೊಳಗೆ ಕಾರ್ಯ ಪೂರ್ಣಗೊಳಿಸಿ ಅಗತ್ಯ ದಾಖಲಾತಿಗಳನ್ನು ಸಹಾಯಕ ಕೃಷಿ ನಿರ್ದೇಶಕರ ಕಚೇರಿ, ________________ತಾಲ್ಲೂಕು ಇವರಿಗೆ ಸಲ್ಲಿಸಲು ಈ ಮೂಲಕ ತಿಳಿಸಿದೆ.

**ಸಹಾಯಕ ಕೃಷಿ ನಿರ್ದೇಶಕರು**
**________________ತಾಲ್ಲೂಕು**

ಪ್ರತಿಯನ್ನು, ಶ್ರೀ/ಶ್ರೀಮತಿ____________________________________ ಬಿನ್/ಕೋಂ ____________, ________________ಗ್ರಾಮ, ________________ಹೋಬಳಿ ______________ತಾಲ್ಲೂಕು____________ಜಿಲ್ಲೆ ಇವರಿಗೆ ಮಾಹಿತಿಗಾಗಿ ಮತ್ತು ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.

ಅನುಬಂಧ 5

## ರೈತರಿಂದ ದೃಢೀಕರಣ ಪತ್ರ
## Authorisation Letter from the Farmer

__________ನೇ ಸಾಲಿನಲ್ಲಿ ________________ಯೋಜನೆಯಡಿ ಶ್ರೀ/ಶ್ರೀಮತಿ ____________________________ಬಿನ್/ಕೋಂ_____________, __________ಗ್ರಾಮ, ________________ ಹೋಬಳಿ__________ ತಾಲ್ಲೂಕು, ___________ಜಿಲ್ಲೆ (ನೋಂದಣಿ ಸಂಖ್ಯೆ: ___________, ಮೊಬೈಲ್ ಸಂಖ್ಯೆ:______________) ಆದ ನಾನು ಮೆ: ____________________________________ಸಂಸ್ಥೆಯ ವತಿಯಿಂದ ________________________ ಕೃಷಿ ಯಂತ್ರೋಪಕರಣ / ಸಂಸ್ಕರಣಾ ಘಟಕವನ್ನು ಕೃಷಿ ಇಲಾಖೆಯ ಮಾರ್ಗಸೂಚಿ ಅನ್ವಯ ಪಡೆಯಲು ಅರ್ಜಿ ಸಲ್ಲಿಸಿದ್ದು, ಈ ಸಂಬಂಧ ನಾನು ರೈತರ ವಂತಿಕೆ ಮೊತ್ತ/ಪೂರ್ಣ ಮೊತ್ತ ರೂ.____________ಗಳನ್ನು ಮಾತ್ರ ಪಾವತಿಸಿರುತ್ತೇನೆ.

ಈ ಸಂಬಂಧ ಸರ್ಕಾರದ ಸಹಾಯಧನವನ್ನು ಮೆ:___________________________ ಸಂಸ್ಥೆಯ ______________ಬ್ಯಾಂಕ್, ಖಾತೆ ಸಂಖ್ಯೆ:_______________,IFSC Code__________ ಗೆ ಅಥವಾ ಸದರಿ ಘಟಕವನ್ನು ಖರೀದಿಸಲು ಪಡೆಯಲಾದ ನನ್ನ ಬ್ಯಾಂಕ್ ಸಾಲದ ಖಾತೆ ಸಂಖ್ಯೆ: ______________, IFSC Code__________ ______________ ಬ್ಯಾಂಕ್‌ಗೆ ಪಾವತಿಸಲು ಕೋರಿದೆ.

(ರೈತರ ಹೆಸರು ಮತ್ತು ಸಹಿ)

ಅನುಬಂಧ-6

## ದರ ಕರಾರು ಹೊಂದಿರುವ ಸಂಸ್ಥೆಗಳು ತಮ್ಮ ಲಾಗಿನ್ ನಲ್ಲಿ ಸಲ್ಲಿಸ ಬೇಕಾದ ತೃಪ್ತಿಕರ ಪ್ರಮಾಣ ಪತ್ರ

ನಾನು ____________________ ಬಿನ್ ____________________ ಗ್ರಾಮ, ______________ ಹೋಬಳಿ, ____________ ತಾಲ್ಲೂಕು, ______________ ಜಿಲ್ಲೆ ನಿವಾಸದಲ್ಲಿ ವಾಸವಾಗಿದ್ದು, ನನ್ನ / ನನ್ನ ಕುಟುಂಬದವರ ಹೆಸರಿನಲ್ಲಿ ____ ಸರ್ವೆ ನಂ. ಗಳಲ್ಲಿ ಒಟ್ಟು ___________ ಎಕರೆ ಜಮೀನಿರುತ್ತದೆ. ಕೃಷಿ ಕೆಲಸಕ್ಕಾಗಿ ನಾನು ___________ಕೃಷಿ ಯಂತ್ರೋಪಕರಣವನ್ನು ಖರೀದಿಸಿದ್ದು, ಕೆಳಕಂಡಂತೆ ದೃಢೀಕರಿಸುತ್ತೇನೆ.

ಸಂಸ್ಥೆಯಿಂದ ____________________________ ಟ್ರ್ಯಾಕ್ಟರ್ ಚಾಲಿತ ಮಾದರಿಯ ___________ ಕೃಷಿ ಯಂತ್ರೋಪಕರಣವನ್ನು / ಕೃಷಿ ಸಂಸ್ಕರಣಾ ಘಟಕವನ್ನು ನನಗೆ ಒಪ್ಪಿಗೆಯಾದ ಬೆಲೆಯಲ್ಲಿ ಸಹಾಯಧನವನ್ನು ಕೃಷಿ ಇಲಾಖೆಯಿಂದ ಮೊದಲನೇ ಸಲ ಪಡೆದಿರುತ್ತೇನೆ.

ಹಿಂದೆ ನಾನು ಕೃಷಿ ಇಲಾಖೆಯಿಂದ ಈ ಸವಲತ್ತನ್ನು ಪಡೆದಿರುವುದಿಲ್ಲ. ಈ ಸವಲತ್ತನ್ನು ಬೇರೆಯವರಿಗೆ ಪರಭಾರೆ ಮಾಡುವುದಿಲ್ಲ ಮತ್ತು ನನಗೆ ಇದರ ಕಾರ್ಯ ವೈಖರಿ ತೃಪ್ತಿಕರವಾಗಿರುತ್ತದೆ.

ದಿನಾಂಕ:

ಇಂತಿ ತಮ್ಮ ವಿಶ್ವಾಸಿ

**(ರೈತರ ಹೆಸರು ಮತ್ತು ಸಹಿ)**

| |
|---|
| ವಿಶೇಷ ಸೂಚನೆ: . ಕೃಷಿ ಯಾಂತ್ರೀಕರಣ, ಕೃಷಿ ಸಂಸ್ಕರಣೆ ಮತ್ತು ಕೃಷಿ ಯಾಂತ್ರೀಕರಣ ಉಪ ಅಭಿಯಾನ ಯೋಜನೆಗಳ ಮಾರ್ಗಸೂಚಿಯಲ್ಲಿ ಯಾವುದೇ ಬದಲಾವಣೆಗಳಿದ್ದಲ್ಲಿ ಕಾಲಕಾಲಕ್ಕೆ ಮಾಹಿತಿ ನೀಡಲಾಗುವುದು ಹಾಗು ಕೇಂದ್ರ ಕಛೇರಿಯಿಂದ ಹೊರಡಿಸಲಾಗುವ ಸೂಚನೆಗಳನ್ನು ಕಾರ್ಯಕ್ರಮ ಅನುಷ್ಠಾನ ಮಾಡುವುದು. |

ಅನುಬಂಧ-A

ಹಾರ್ವೆಸ್ಟರ್ ಹಬ್‌ವಾರು ಕಾರಿಡಾರ್‌ನಲ್ಲಿ ಬರುವ ಜಿಲ್ಲೆಗಳ ವಿವರಗಳು

**A. Combined Harvester Hub:**

| Sl.No. | Districts |
|---|---|
| 1. | Uttara Kannada, Dharwad, Belagavi, Bagalkote, Vijayapura, Kalburgi, Yadagiri & Bidar. |
| 2. | Dakshina Kannada, Udupi, Chikkamagaluru, Shivamogga, Davanagere, Haveri, Gadag, Koppala, Vijayanagara, Bellary & Raichur. |
| 3. | Hassan, Chitradurga, Tumkur, Bengaluru, Chikkaballapur & Kolar. |
| 4. | Ramanagara, Mandya, Mysuru, Kodagu & Chamarajanagar. |

**B. Sugarcane Harvester Hub:**

| Sl.No. | Districts |
|---|---|
| 1. | Uttara Kannada, Dharwad, Belagavi, Bagalkote, Vijayapura, Kalburgi, Yadagiri & Bidar. |
| 2. | Shivamogga, Davanagere, Haveri, Gadag, Koppala, Vijayanagara, Bellary & Raichur. |
| 3. | Hassan, Tumkur, Mandya, Mysuru & Chamarajanagar. |

ಅನುಬಂಧ - B

ವಿವಿಧ ಹಾರ್ವೆಸ್ಟರ್ ಹಬ್‌ಗಳಿಗೆ ಫಲಾನುಭವಿವಾರು ನಿಗದಿಪಡಿಸಿದ ಗರಿಷ್ಠ ಸಹಾಯಧನದ ಮೊತ್ತದ ವಿವರಗಳು

(ರೂ.ಲಕ್ಷಗಳಲ್ಲಿ)

| Sl. No. | Item | General (Individual) | Institutions | SCP (Individual) | TSP (Individual) |
|---|---|---|---|---|---|
| 1. | Combo Harvesters Hub | 0.00 | 100.00 | 0.00 | 0.00 |
| 2. | Combined Harvester Hub | 40.00 | 50.00 | 50.00 | 50.00 |
| 3. | Sugarcane Harvester Hub | 40.00 | 50.00 | 50.00 | 50.00 |

ಅನುಬಂಧ - C

ಹೈಟೆಕ್ ಹಾರ್ವೆಸ್ಟರ್ ಹಬ್‌ಗಳಿಗೆ ಲಭ್ಯವಾಗುವ ಹೈಟೆಕ್ ಯಂತ್ರೋಪಕರಣವಾರು ನಿಗದಿಪಡಿಸಿರುವ ಗರಿಷ್ಠ ಸಹಾಯಧನದ ವಿವರಗಳು ಈ ಕೆಳಕಂಡಂತಿದೆ:

| Sl. No. | Name of the machine | Individual (General) | | Institution | | Individual (SCP/TSP) | |
|---|---|---|---|---|---|---|---|
| | | Max. Subsidy percent | Max. subsidy amount in Rs.lakhs | Max. Subsidy percent | Max. subsidy amount in Rs.lakhs | Max. subsidy percent | Max. subsidy amount in Rs.lakhs |
| 1 | Combined Harvester (Track/Wheel/TOT/Tractor operated) | 50% | 11.00 | 70% | 15.40 | 70% | 15.40 |
| 2 | Sugarcane Harvester | 40% | 39.00 | 50% | 49.00 | 50% | 49.00 |
| 3 | Self-propelled Reapers | 50% | 1.50 | 70% | 2.10 | 70% | 2.10 |
| 4 | Tractor operated Hay Rake | 50% | 1.50 | 70% | 2.10 | 70% | 2.10 |
| 5 | Tractor operated Balers | 50% | 9.00 | 70% | 12.60 | 70% | 12.60 |
| 6 | Hi-tech High volume Multi Crop Thresher > 4 tonne/hr & suitable for minimum 6 crops. | 50% | 2.50 | 70% | 3.50 | 70% | 3.50 |
| 7 | Silage making Machine | 50% | 3.75 | 70% | 5.25 | 70% | 5.25 |
| 8 | Stubble Shaver with fertiliser box | 50% | 0.50 | 70% | 0.70 | 70% | 0.70 |
| 9 | Single row Mobile Shredder | 50% | 1.15 | 70% | 1.60 | 70% | 1.60 |
| 10 | Rice Straw chopper | 50% | 2.00 | 70% | 2.80 | 70% | 2.80 |
| 11 | Roto Slasher | 50% | 0.40 | 70% | 0.56 | 70% | 0.56 |
| 12 | Tractor operated Mulcher | 50% | 1.10 | 70% | 1.54 | 70% | 1.54 |
| 13 | Interrow Rotavator | 50% | 0.88 | 70% | 1.23 | 70% | 1.23 |

ಅನುಬಂಧ – D

ಹೈಟೆಕ್ ಹಾರ್ವೆಸ್ಟರ್ ಹಬ್ ವಾರು ಕಡ್ಡಾಯ/ ಐಚ್ಛಿಕವಾಗಿ ದಾಸ್ತಾನೀಕರಿಸಬೇಕಾದ ಯಂತ್ರೋಪಕರಣಗಳ ವಿವರಗಳು

| ಕ್ರ. ಸಂ. | ಕಡ್ಡಾಯವಾಗಿ ದಾಸ್ತಾನೀಕರಿಸಬೇಕಾದ ಯಂತ್ರೋಪಕರಣಗಳು | ಕ್ರ. ಸಂ. | ಐಚ್ಛಿಕವಾಗಿ ದಾಸ್ತಾನೀಕರಿಸಬೇಕಾದ ಯಂತ್ರೋಪಕರಣಗಳು |
|---|---|---|---|
| | **Combo ಹಾರ್ವೆಸ್ಟರ್ ಹಬ್** | | |
| 1. | Combined Harvester (Track/Wheel/TOT/Tractor operated) | 1. | Self-propelled Reapers |
| 2. | Sugarcane Harvester | 2. | Tractor operated Hay Rake |
| 3. | Interrow Rotavator | 3. | Hi-tech High volume Multi Crop Thresher, >4 tonne/hr & suitable for minimum 6 crops. |
| 4. | Tractor operated Balers | 4. | Silage making Machine |
| | | 5. | Stubble Shaver with fertiliser box |
| | | 6. | Single row Mobile Shredder |
| | | 7. | Rice Straw chopper |
| | | 8. | Roto Slasher |
| | | 9. | Tractor operated Mulcher |
| | **ಕಂಬೈನ್ಡ್ ಹಾರ್ವೆಸ್ಟರ್ ಹಬ್** | | |
| 1. | Combined Harvester (Track/Wheel/TOT/Tractor operated) | 1. | Self-propelled Reapers |
| 2. | Tractor operated Balers | 2. | Tractor operated Hay Rake |
| | | 3. | Hi-tech High volume Multi Crop Thresher, >4 tonne/hr & suitable for minimum 6 crops. |
| | | 4. | Silage making Machine |
| | | 5. | Stubble Shaver with fertiliser box |
| | | 6. | Single row Mobile Shredder |
| | | 7. | Rice Straw chopper |
| | | 8. | Roto Slasher |
| | | 9. | Tractor operated Mulcher |
| | | 10. | Interrow Rotavator |
| | **ಶುಗರ್‌ಕೇನ್ ಹಾರ್ವೆಸ್ಟರ್ ಹಬ್** | | |
| 1. | Sugarcane Harvester | | |
| 2. | Interrow Rotavator | | |

Government of Karnataka
(Department of Agriculture)

No.DDA(FM&MI)/FM/2022-23/ BG Return/
2024-25

Commissionerate of Agriculture
Sheshadri Road, Bengaluru-01
Dated:

To,

The Manager,
Canara Bank,
Sedam Branch,
Kalburgi.

Sir/Madam,

Sub: Discharge of Bank Guarantee No: M50GOPG223655001 & M5002454GPGE2303401 submitted by M/s. Naomika and Company.

Ref: Request for Proposal notification No DDA(FM&MI)/ FM RFP Dt.14.02.2022

With reference to the above subject, the Department of Agriculture vide reference (1) had invited Request for Proposal for empanelment of Farm Machineries and Agro-Processing Units to supply under departmental subsidy schemes and to CHSCs for the financial year 2022-23 and 2023-24. The Department of Agriculture, Government of Karnataka hereby duly discharges the following bank guarantee submitted by the empanelled firm.

Name of the Firm: M/s. Naomika and Company.

| SI No | Bank Guarantee Number | Issue Date | Amount of BG (In Lakhs) |
|---|---|---|---|
| 1 | M50GOPG223655001 | 31.12.2022 | 2.00 |
| 2 | M5002454GPGE2303401 | 03.02.2023 | 10.00 |

(Draft approved by Director of Agriculture)

Additional Director of Agriculture
(I/C Organic Farming)

Copy to: M/s. Naomika and Company, #45/03/Wp, Srigandhada Kaval, Sukandakatte, Bangalore-560091. Email: info@naomika.co.in.